# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕರ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 • ಸಂಚಿಕೆ:297 • ನೋಂದಣಿ ನಂ.:KARKAN27911 • ವಿಜಯನಗರ • 25.04.2024 • ಗುರುವಾರ • ಪುಟ:04 • ಬೆಲೆ:2
Volume:01 • Issue:297 • Reg.No:KARKAN27911 • VIJAYANAGARA • 25.04.2024 • Thursday • Page:04 • Rs:2




ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.
ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ
55,000 Plus readers
Place Your Ads
Reach New Audience
9448633038
hampitimes@gmail.com
Valmiki Circle, Hosapete-583201




NATIONAL PU COLLEGE
HARIHAR ROAD, HOSAPETE-583203, Phone: 08394-230445
Congratulations to all Who made us proud
SCHOLARSHIP UPTO 30,000 /-
FOR MERITORIOUS STUDENTS
SCIENCE Distinctions: 60 FirstClass: 61
Consistent & quality results since 16 years in both Science & Commerce
THE ONLY COLLEGE IN HOSAPETE TO SECURE MORE NUMBER OF DISTINCTIONS
The trustworthy team of pcmb lecturers led by R. Shashidhar has been effectively managing the academic progress of National PU College since June 2009.
Bus facility from Hospet city, M M Halli, Huligi & Munirabad, HAMPI, KAMALAPURA
M: 94481 73436, 94499 80200

MEDHA S R V 585/600- 97.50%
CHINMAYEE B L 583/600- 97.20%
CHINMAYI SALMATH 581/600- 96.80%


# ಮೌನ ಮದುವೆ ಅದ್ದೂರಿ

## ಇಬ್ಬರಿಗೂ ಮಾತು ಬರಲ್ಲ-ಕಿವಿ ಕೇಳಲ್ಲ | ಭೀತ್ಯಾನ ತಾಂಡದಲ್ಲಿ ವಿವಾಹ



■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ನನ್ನ ಮಗಳು ಬಲು ಸುಂದರಿ ಹುಡುಗ ಸೆಟ್ ಆಗ್ತಿಲ್ಲಾ, ನನ್ನ ಮಗ ಬೇಕಾದಷ್ಟು ದುಡಿತಾನೆ, ಆಸ್ತಿಯೂ ಇದೆ ಯಾರಿಗೇನು ಕಡಿಮೆ ಇಲ್ಲ ಆದ್ರೆ ಹೆಣ್ಣೇ ಸಿಗ್ತಿಲ್ಲಾ ಎನ್ನುವ ಈ ಕಾಲಘಟ್ಟದಲ್ಲಿ ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಭೀತ್ಯಾ ತಾಂಡದಲ್ಲಿ ಅಪರೂಪದ ಜೋಡಿಗಳು ಬಾಳಬಂಡಿಯನ್ನು ಕೂಡಿ ಸಾಗಿಸಲು ಬುಧವಾರ ಸಪ್ತಪದಿ ತುಳಿದಿದ್ದಾರೆ.

ಮನುಷ್ಯನ ಎಲ್ಲಾ ಅಂಗಾಂಗಗಳು ಸರಿ ಇದ್ದರೂ ಹೊಂದಾಣಿಕೆ ಕೊರತೆಯಿಂದ ಕೆಲ ಸಂಸಾರಗಳು ಮೂರಾಬಟ್ಟಿಯಾಗುತ್ತಿವೆ ಎನ್ನುವ ಮಾತುಗಳು ದಟ್ಟವಾಗಿ ಕೇಳಿಬರುತ್ತಿವೆ. ಆದರೆ ಇಲ್ಲೊಂದು ಅಪರೂಪದ ಮದುವೆಯನ್ನು ನೋಡಿದವರ ಕಣ್ಣಾಲೆಗಲ್ಲೆ ಆನಂದಭಾಷ್ಪ ಹರಿದುಬಂದವು. ವಧುವರರಿಬ್ಬರಿಗೂ ಕಿವಿ ಕೇಳಲ್ಲ, ಮಾತನಾಡಲು ಮೊದಲೇ ಬರಲ್ಲ, ಏನಿದ್ದರೂ ಕೈ ಕಣ್‌ಗಳಿಂದಲೇ ಚಲನವಲನಗಳು. ನವಜೋಡಿಗೆ ಕೂಡಿಬಂದ ಕಂಕಣಬಲದಲ್ಲಿ ಎಲ್ಲರೂ ಹರ್ಷದಿಂದಲೇ ಪಾಲ್ಗೊಂಡಿದ್ದರು

ಈ ಅಪರೋಪದ ಮದುವೆ ತಾಲೂಕಿನ ಹಂಪಸಾಗರದ ಹತ್ತಿರದ ಭೀತ್ಯಾನತಾಂಡದಲ್ಲಿ ಜರುಗಿತು. ವಧುವಿನ ಹೆಸರು ಬಿ.ನಿರ್ಮಲ (ಬಿ.ಭಾರ್ಗವಿ), ಭೀತ್ಯಾನತಾಂಡದ ಮೀರಾಬಾಯಿ ಕೆ.ಭೀಮಾನಾಯ್ಕ್‌ರವರಿಗೆ 3 ಜನ ಹೆಣ್ಣು, ಒಬ್ಬ ಮಗನಿದ್ದಾನೆ. ಅದರಲ್ಲಿ ನಿರ್ಮಲ ಹಿರಿಯ ಪುತ್ರಿಯಾಗಿದ್ದು, ಹುಟ್ಟಿದಾಗಿನಿಂದಲೇ ಇವರಿಗೆ ಕಿವಿ ಕೇಳಲ್ಲ, ಮಾತು ಬರಲ್ಲ, ಅದರಂತೆ ಮತ್ತೊಬ್ಬ ಪುತ್ರಿಗೂ ಇದೇ ರೀತಿ ಅಂಗವೈಕಲ್ಯವಿದೆ. ನಿರ್ಮಲ ಓದಿದ್ದು, ವಿಶೇಷವಾದ ಶಿಕ್ಷಣದಲ್ಲಿ ಡಿಪ್ಲೋಂ ಇನ್ ಕಂಪ್ಯೂಟರ್ ಮಾಡಿದ್ದಾರೆ. ಈಗ ಬೆಂಗಳೂರಿನ ಟಿವಿಎಸ್ ಶೋ ರೂಂನಲ್ಲಿ ಕೆಲಸಕ್ಕೆ ಸೇರಿದ್ದಾರೆ. ತಿಂಗಳಿಗೆ ಎಲ್ಲಾ ಸೌಲಭ್ಯಗಳನ್ನು ಹೊರತುಪಡಿಸಿ, 25 ಸಾವಿರ ರೂ. ವೇತನವಿದೆ. ನಿರ್ಮಲಗೆ ಈ ರೀತಿ ಅಂಗವೈಕಲ್ಯ ಕಾರಣ ಕೇಳಿದರೆ, ನಾನು ಅಕ್ಕನ ಮಗಳನ್ನೇ ಮದುವೆಯಾಗಿದ್ದು ಒಂದು ಕಾರಣವಿರಬಹುದು ಎಂದೇಳುವ ಭೀಮಾನಾಯ್ಕ್, ತಾವು ಎಂ.ಕಾಂ ಎಲ್.ಎಲ್.ಬಿ ಶಿಕ್ಷಣಹೊಂದಿದ್ದು, ಈಗ ದುರ್ಗಾದೇವಿ ಮೀನುಗಾರರ ಸಹಕಾರ ಸಂಘದ ಅಧ್ಯಕ್ಷರಾಗಿದ್ದಾರೆ. ಮಕ್ಕಳ ಅಂಗವೈಕಲ್ಯ ಬಾಧೆ ನಮಗಿಲ್ಲ. ನಮ್ಮ ಸಂಸಾರ ಸುಖಿ ಸಂಸಾರವಾಗಿದೆ. ಮಗಳ ಮದುವೆ ಮನೆಯಲ್ಲಿ ಸಂಭ್ರಮವನ್ನುಂಟು ಮಾಡಿದೆ. ಸಮಾಜದಲ್ಲಿರುವ ಇಂತಹ ಅಂಗವೈಕಲ್ಯರಿಗೆ ಸರ್ಕಾರ ವಿಶೇಷವಾದ ಗಮನ ಹರಿಸಿದರೆ. ಅವರ ಜೀವನವೂ ಇತರರಿಗಿಂತ ಚನ್ನಾಗಿಯೇ ಇರುತ್ತದೆ ಎಂದು ಆಶಯ ವ್ಯಕ್ತಪಡಿಸುತ್ತಾರೆ.

ಇನ್ನು ವರ ಮುಂಡರಗಿ ತಾಲೂಕಿನ ಸೇವಾನಗರ (ಕೇರಳ್ಳಿತಾಂಡ)ದವರಾಗಿದ್ದು, ಲಕ್ಕವ್ವ ಸಕ್ರಪ್ಪ ಲಮಾಣಿಯವರಿಗೆ 3 ಜನ ಮಕ್ಕಳಿದ್ದಾರೆ. ಅವರಲ್ಲಿ ಹಿರಿಯ ಪುತ್ರ ಧನ್‌ಸಿಂಗ್ ಇವರಿಗೂ ಹುಟ್ಟಿದಾಗಿನಿಂದಲೇ ಕಿವಿಕೇಳಲ್ಲ ಮಾತು ಬರಲ್ಲ ಎಂದು ಹೇಳುತ್ತಾರೆ ಪಾಲಕರು, ಈ ಧನ್‌ಸಿಂಗ್ ಓದಿದ್ದು ಪಿಯುಸಿಯಾದರೂ ಕೆಲಸ ಬೆಂಗಳೂರಿನ ಏರ್‌ಪೋರ್ಟ್‌ನ ಖಾಸಗಿ ಕಂಪನಿಯಲ್ಲಿ ವೇತನ 20 ಸಾವಿರ ರೂ.ಗಳಿವೆ. ಇವರೊಂದಿಗೆ ಹತ್ತಾರು ಯುವಕರು ಇದೇ ರೀತಿ ಅಂಗವೈಕಲ್ಯವನ್ನು ಅನುಭವಿಸುತ್ತಿದ್ದಾರೆ. ನಮ್ಮ ಕುಟುಂಬದಲ್ಲಿ ಯಾರೂ ಅಂಗವೈಕಲ್ಯವಿಲ್ಲ. ಆದರೆ, ನಮ್ಮ ಹಿರಿಯ ಪುತ್ರನಿಗೆ ಈ ರೀತಿ ಆಗಿದ್ದು, ದೇವರ ಕರುಣೆಯಲ್ಲಿ ಕಮ್ಮಿಯಾಗಿದೆ ಎನಿಸುತ್ತಿದೆ. ಈ ಮದುವೆ ನಮಗೆ ತುಂಭಾ ಸಂತೋಷ ತಂದಿದೆ. ನಮಗೆ ಸೊಸೆ ಮತ್ತು ಮಗಳು ನಿರ್ಮಲನೇಯಾಗಿದ್ದಾರೆ ಎಂದು ಪಾಲಕರು ಹೇಳುತ್ತಾರೆ.

ಈ ನೂತನ ವಧುವರರನ್ನು ಅವರದೇ ಭಾಷೆಯಲ್ಲಿ ಮಾತನಾಡಿಸಿದಾಗ, ಈ ಮದುವೆ ನಮಗೆ ಉತ್ಸಹ, ಸಂತೋಷ, ಸಂಭ್ರಮ ತಂದಿದೆ ಎಂದು ಕೈಗಳ ಚಲನಾವಲನದಿಂದ ಮತ್ತು ನಗುಮುಖದಿಂದಲೇ ಖುಷಿಪಡುತ್ತಿದ್ದಾರೆ. ವೇದಿಕೆಗೆ ಆಗಮಿಸುವ ಬಂಧು ಬಾಂಧವರೊಂದಿಗೆ ಪೋಟೋ ತೆಗೆಸಿಕೊಳ್ಳುವ ಸಂಭ್ರಮ ಮನೆ ಮಾಡಿದ್ದು ಕಂಡು ಬಂದಿತು. ಹೊಸ ಜೀವನ ಕಟ್ಟಿಕೊಳ್ಳುತ್ತಿರುವ ಇವರಿಗೆ ಶುಭವಾಗಲಿ.



> ಇಂಥ ಅಪರೂಪದ ಮದುವೆಗಳು ಸಮಾಜಕ್ಕೆ ಮಾದರಿ, ಈ ನವಜೋಡಿ ಜೀವನದಲ್ಲಿ ನೂರ್ಕಾಲ ಸುಖ ಸಂತೋಷದಿಂದ ಜೀವನ ನಡೆಸಲಿ. ಮಕ್ಕಳನ್ನು ಹೆತ್ತು ಅವರನ್ನು ಸಮಾಜದ ಆಸ್ತಿಯನ್ನಾಗಿ ಮಾಡಲಿ. ನವ ಜೋಡಿಗೆ ಶುಭವಾಗಲಿ
>
> – ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿ.

# ಹಂಪಿಯ ಸಾಂಸ್ಕೃತಿಕ ನೆಲದಲ್ಲಿ ಕಲಾ ವೈಭವ

■ ಹಂಪಿ ಟೈಮ್ಸ್ ಹೊಸಪೇಟೆ



ಕಲೆ ಸಂಸ್ಕೃತಿಯ ಹಂಪಿ ನೆಲದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಮೂಲಕ ಕಲಾವಿದರ ಕಲೆಗೆ ಪ್ರೋತ್ಸಾಹ ದೊರೆಯುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಹಂಪಿ ಗ್ರಾಪಂ ಪಿಡಿಒ ಗಂಗಾಧರ ಹೇಳಿದರು.

ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಆವರಣದಲ್ಲಿ ಹಂಪಿ ಜಾತ್ರೆ ನಿಮಿತ್ತ ಶ್ರೀ ಮರಿದೇವ ಸಂಗೀತ ಸಾಂಸ್ಕೃತಿಕ ಕಲಾವೃಂದ, ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನ ಸಹಕಾರದೊಂದಿಗೆ ಹಮ್ಮಿಕೊಂಡಿದ್ದ ಭಕ್ತಿ ಭಾವನಾ ಸಂಗೀತ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿದರು. ಸತತ 26 ವರ್ಷಗಳಿಂದ ಕಲಾವೃಂದದ ಸಂಸ್ಥಾಪಕ ಅಂಗಡಿ ವಾಮದೇವ ಅವರು ಸಂಗೀತ ಕಲೆ ಸಂಸ್ಕೃತಿ ಉಳಿವಿಗೆ ಶ್ರಮಿಸುತ್ತಿದ್ದಾರೆ. ಹಂಪಿ ಬಯಲು ಸುತ್ತಾಡಿ ಸಂಜೆ ಆವರಣದಲ್ಲಿ ಜಮಾಯಿಸಿದ ಭಕ್ತರಿಗೆ ಪ್ರವಾಸಿಗರಿಗೆ ಈ ನೆಲದ ಸಂಗೀತ ಸಾಂಸ್ಕೃತಿಕ ರಸದೌತಣ ಉಣಬಡಿಸುತ್ತಿದ್ದಾರೆ. ಕಲೆ ಉಳಿವಿಗೆ ಕಲಾವಿದರಿಗೆ ಮತ್ತಷ್ಟು ಅವಕಾಶಗಳು ದೊರೆಯುವಂತಾಗಲಿ ಎಂದರು.

ವಿದ್ಯಾರಣ್ಯ ಪೀಠಾಧಿಪತಿ ಶ್ರೀ ಜಗದ್ಗುರು ಶಂಕರಾಚರ್ಯ ವಿದ್ಯಾರಣ್ಯ ಭಾರತಿ ಸ್ವಾಮಿಗಳು ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. ಶ್ರೀ ಮರಿದೇವ ಸಂಗೀತ ಸಾಂಸ್ಕೃತಿಕ ಕಲಾವೃಂದದ ಸಂಸ್ಥಾಪಕಾಧ್ಯಕ್ಷ ಅಂಗಡಿ ವಾಮದೇವ, ಕಲಾಪೋಷಕರಾದ ಎ.ದೊಡ್ಡ ಬಸಪ್ಪ, ಕೆ.ಪಂಪನಗೌಡ, ಹೆಚ್.ಕೆ. ತರುಣ್‌ಕುಮಾರ್ ಇತರರು ಉಪಸ್ಥಿತರಿದ್ದರು.

ಶ್ರೀ ಮರಿದೇವಸಂಗೀತ ಸಾಂಸ್ಕೃತಿಕ ಕಲಾ ವೃಂದದ ಕಲಾವಿದರು ಸೇರಿದಂತೆ ವಿವಿಧ ಕಲಾವಿದರು ಭಕ್ತಿ ಗೀತೆ, ಸುಗಮ ಸಂಗೀತ, ಜಾನಪದ ಗೀತೆಗಳು, ಜನಪದ ನೃತ್ಯ ಪ್ರದರ್ಶನ, ಸಮೂಹ ನೃತ್ಯ, ಭರತ ನಾಟ್ಯ ಮತ್ತು ಸ್ಥಳೀಯ ಕಲಾವಿದರಿಂದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದ ಭಕ್ತರ ಗಮನ ಸೆಳೆದವು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


TAFE
MASSEY FERGUSON
ವಿಜಯಶ್ರೀ ಮೋಟಾರ್ಸ್ (ಟ್ರ್ಯಾಕ್ಟರ್ ವಿಭಾಗ)
RRR GROUP

99801 27607
73533 06719



ಸುದ್ದಿ, ಜಾಹೀರಾತು ಕಚೇರಿ
ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.
ಹಂಪಿ ಟೈಮ್ಸ್
ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಮೊ: 94486 33038
Email: hampitimes@gmail.com


## ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಪದಾಧಿಕಾರಿಗಳ ನೇಮಕ

ಹಂಪಿ ಟೈಮ್ಸ್ ಹೊಸಪೇಟೆ:

ವಿಜಯನಗರ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಜಿಲ್ಲಾ ಉಪಾಧ್ಯಕ್ಷರಾಗಿ ಕೆ. ರಮೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಅನಂತ ಪದ್ಮನಾಭ ಮತ್ತು ಉಲವತ್ತಿ ಸೋಮಲಿಂಗಪ್ಪ ಅವರನ್ನು ಹಾಗೂ ಜಿಲ್ಲಾ ಕಾರ್ಯದರ್ಶಿಯನ್ನಾಗಿ ಎಸ್. ಎರ್ರಿಸ್ವಾಮಿ ಅವರನ್ನು ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ ರವರು ಅನುಮೋದನೆ ಮೆರೆಗೆ ನೇಮಕ ಮಾಡಲಾಗಿದೆ ಎಂದು ವಿಜಯನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಶ್ರೀ ಸಿರಾಜ್ ಶೇಖ್ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಆದೇಶ ಪತ್ರಗಳನ್ನು ನೂತನ ಪದಾಧಿಕಾರಿಗಳಿಗೆ ನೀಡಿದರು.

## ಇಂದು ಹೊಸಪೇಟೆ ತಾಲೂಕಿನ ವಿವಿಧ ಗ್ರಾಮ, ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಹಂಪಿ ಟೈಮ್ಸ್ ಹೊಸಪೇಟೆ

110 ಕೆವಿ ಸಂಕ್ಲಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣೆ ಕೆಲಸ ನಡೆಯುತ್ತಿರುವ ಪ್ರಯುಕ್ತ ಏಪ್ರಿಲ್ 25 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ವಿವಿಧ ಏರಿಯಾಗಳ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ನಗರದ ವಿವಿಧ ವಾರ್ಡ್‌ಗಳು ಸೇರಿದಂತೆ ಜಂಬುನಾಥ ಗುಡಿ, ಕೆ.ಒ.ಎಫ್, ಎಂ.ಪಿ.ಪ್ರಕಾಶ ವಿಜಯನಗರ, ಸಂಕ್ಲಾಪುರ, ಟಿ.ಎಸ್.ಪಿ, ಎನ್.ಸಿ ಕಾಲೋನಿ, ರಾಜಾಪುರ(ಎನ್.ಜೆ.ವೈ), ಬಸವನ ದುರ್ಗ(ಎನ್.ಜೆ.ವೈ), ಬಿ.ವಿ ಗೆರೆ (ಐಪಿ), ಕಲ್ಲಹಳ್ಳಿ(ಐಪಿ), ಜೆ.ವಿ.ಎಸ್.ಎಲ್ ಫಿಡರ್ಸ್, ಎಫ್-2 ಮಲಪನಗುಡಿ, ಎಫ್-3 ಬುಕ್ಕಸಾಗರ, ಎಫ್-4 ಯುನಿವರ್ಸಿಟಿ ಮತ್ತು ಕ್ರಶರ್, ಎಫ್-5 ಹಂಪಿ, ಎಫ್-6 ನಲ್ಲಾಪುರ, ಎಫ್-7 ಪಿ. ಕೆ. ಹಳ್ಳಿ, ಎಫ್-8 ಹಾಸ್ಟೆಲ್, ಎಫ್-9 ಚಿನ್ನಾಪುರ, ಎಫ್-12 ಕಮಲಾಪುರ, ಎಫ್-13 ಗಾದಿಗನೂರು, ಎಫ್-14 ಮಲ್ಯವಂತ ವ್ಯಾಪ್ತಿಗೆ >>4


## ವಿಜ್ಞಾನ

# ನೆಪ್ಚೂನ್ ಏಕೆ ನೀಲಿ ಬಣ್ಣದಲ್ಲಿ ಕಾಣುತ್ತದೆ?

■ ಅರ್.ಬಿ.ಗುರುಬಸವರಾಜ

ತರಗತಿಯಲ್ಲಿ ಶಿಕ್ಷಕರು ಸೌರವ್ಯೂಹದ ಬಗ್ಗೆ ತಿಳಿಸುತ್ತಿದ್ದರು. ಪ್ರೊಜೆಕ್ಟರ್ ಬಳಸಿ ಗ್ರಹಳ ಚಲನೆ, ಗಾತ್ರ, ಸೂರ್ಯನಿಂದ ಇರುವ ದೂರ, ಅವುಗಳ ಮೇಲ್ಮೈ ಅಂಶಗಳ ಬಗ್ಗೆ ತಿಳಿಸುತ್ತಿದ್ದರು. ಸ್ಕ್ರೀನ್ ಮೇಲೆ ಎಲ್ಲಾ ಗ್ರಹಗಳ ಚಿತ್ರವನ್ನು ನೋಡುತ್ತಾ ಕುಳಿತಿದ್ದ ರುದ್ರೇಶನ ಮನದಲ್ಲಿ ತಟ್ಟನೆ ಪ್ರಶ್ನೆಯೊಂದು ಮೂಡಿತು. ಎದ್ದುನಿಂತು "ಸರ್, ಎಲ್ಲಾ ಗ್ರಹಗಳಿಗಿಂತ ನೆಪ್ಚೂನ್ ಏಕೆ ನೀಲಿ ಬಣ್ಣದಲ್ಲಿ ಕಾಣುತ್ತದೆ?" ಎಂದ. ಅವನ ಪ್ರಶ್ನೆಯನ್ನು ಮೆಚ್ಚಿದ ಶಿಕ್ಷಕರು ನೆಪ್ಚೂನ್‌ನ ಬಣ್ಣದ ಬಗ್ಗೆ ವಿವರಿಸಿದರು.

ಬಾಹ್ಯಾಕಾಶದಿಂದ ನೋಡಿದಾಗ ನೆಪ್ಚೂನ್ ನೀಲಿ ಬಣ್ಣದಲ್ಲಿ ಕಾಣುತ್ತದೆ. ಮೂಲತಃ ಇದು ಸಂಪೂರ್ಣ ನೀಲಿಯಾಗಿಲ್ಲ. ಅಲ್ಪಪ್ರಮಾಣದಲ್ಲಿ ಹಸಿರು ಬಣ್ಣವೂ ಇದೆ. ನೆಪ್ಚೂನ್‌ನ ವಾತಾವರಣದಲ್ಲಿ ಮೀಥೇನ್ ಅನಿಲದ ಉಪಸ್ಥಿತಿಯಿಂದಾಗಿ ಅದು ನೀಲಿ ಬಣ್ಣದಲ್ಲಿ ಕಾಣುತ್ತದೆ. ಮೀಥೇನ್ ಅನಿಲವು ಕೆಂಪು ಬೆಳಕನ್ನು ಹೀರಿಕೊಳ್ಳುತ್ತದೆ ಮತ್ತು ನೀಲಿ ಬೆಳಕನ್ನು ಪ್ರತಿಫಲಿಸುತ್ತದೆ. ಹಾಗಾಗಿ ಗ್ರಹಕ್ಕೆ ವಿಶಿಷ್ಟವಾದ ನೀಲಿ ಬಣ್ಣವನ್ನು ನೀಡುತ್ತದೆ. ನೆಪ್ಚೂನ್‌ನ ವಾತಾವರಣವು ಪ್ರಾಥಮಿಕವಾಗಿ ಹೈಡ್ರೋಜನ್ ಮತ್ತು ಹೀಲಿಯಂಗಳಿಂದ ಕೂಡಿದೆ. ಅಲ್ಪ ಪ್ರಮಾಣದಲ್ಲಿ ಮೀಥೇನ್ ಇದೆ. ಇದು ಗ್ರಹದ ವಾತಾವರಣದ ಕೇವಲ 2.3% ರಷ್ಟಿದೆ. ಆದಾಗ್ಯೂ ನೆಪ್ಚೂನ್‌ಗೆ ವಿಶಿಷ್ಟವಾದ ನೀಲಿ ಬಣ್ಣವನ್ನು ನೀಡಲು ಮೇಲ್ಮೈ ವಾತಾವರಣದಲ್ಲಿರುವ ಮೀಥೇನ್ ಸಾಕಾಗುತ್ತದೆ.




ನೆಪ್ಚೂನ್‌ನ ನೀಲಿ ಬಣ್ಣವು ಭೂಮಿಯ ವಾತಾವರಣದ ನೀಲಿ ಬಣ್ಣವನ್ನು ಹೋಲುತ್ತದೆ. ಇದು ವಾತಾವರಣದಲ್ಲಿನ ಅನಿಲಗಳಿಂದ ಸೂರ್ಯನ ಬೆಳಕನ್ನು ಚದುರಿಸುವಿಕೆಯಿಂದ ಕೂಡಿದೆ. ಭೂಮಿಯ ವಾತಾವರಣವು ಹೆಚ್ಚಾಗಿ ಸಾರಜನಕ ಮತ್ತು ಆಮ್ಲಜನಕವನ್ನು ಹೊಂದಿದೆ. ಇದು ಮೀಥೇನ್ ರೀತಿಯಲ್ಲಿ ಬೆಳಕನ್ನು ಹೀರಿಕೊಳ್ಳುವುದಿಲ್ಲ ಮತ್ತು ಪ್ರತಿಫಲಿಸುವುದಿಲ್ಲ. ಭೂಮಿಯು ನೀಲಿಯಾಗಿ ಕಾಣಲು ವಾತಾವರಣ ಮತ್ತು ಸಮುದ್ರದ ನೀರಿನ ವರ್ಣವಿಭಜನೆ ಕಾರಣವಾಗಿದೆ. ಆದರೆ ನೆಪ್ಚೂನ್‌ನಂತೆ ಸಂಪೂರ್ಣ ನೀಲಿ ಅಲ್ಲ ಎಂಬುದು ಮುಖ್ಯ.. ನೆಪ್ಚೂನ್‌ನ ವಾತಾವರಣದಲ್ಲಿರುವ ಮೀಥೇನ್ ಅನಿಲವು ಸೂರ್ಯನಿಂದ ಮತ್ತು ಗ್ರಹದ ಕಾಂತಕ್ಷೇತ್ರದಿಂದ ಹೆಚ್ಚಿನ ಶಕ್ತಿಯ ಕಣಗಳಿಂದ ನಿರಂತರವಾಗಿ ಸ್ಫೋಟಗೊಳ್ಳುತ್ತದೆ. ಸ್ಫೋಟಗೊಂಡಾಗ ಮೀಥೇನ್ ಅಣುಗಳು ಈಥೇನ್ ಮತ್ತು ಅಸಿಟಿಲೀನ್‌ನಂತಹ ಇತರ ಸಂಯುಕ್ತಗಳಾಗಿ ಒಡೆಯಲು ಕಾರಣವಾಗುತ್ತದೆ. ಇದು ಗ್ರಹದ ವಾತಾವರಣಕ್ಕೆ ಸರಳವಾದ ನೀಲಿ ಬಣ್ಣಕ್ಕಿಂತ ಹೆಚ್ಚು ಸಂಕೀರ್ಣ ಬಣ್ಣವನ್ನು ನೀಡುತ್ತದೆ.


ಕನ್ನಡದ ಲೇಖನ, ಸುದ್ದಿಗಳನ್ನು ಈಗ ನಿಮ್ಮ ಮಾತೃಭಾಷೆಯಲ್ಲೆ ಆಯ್ಕೆ ಮಾಡಿಕೊಂಡು ಓದಿ
www.hampitimes.com



|| ಶ್ರೀ ಸಿದ್ಧಿವಿನಾಯಕ ಪ್ರಸನ್ನ ||
ಕೇರಳ ಮಾಂತ್ರಿಕ ಜ್ಯೋತಿಷ್ಯರು
ಕೇರಳದ ಮಳಯಾಳ ಕುಟ್ಟಿಚಾತನ್ ಪದ್ಧತಿಯಿಂದ ಶೀಘ್ರ ಪರಿಹಾರ

9880956386
ವಿದ್ಯೇ ಉದ್ಯೋಗ, ಲೈಂಗಿಕ ಸಮಸ್ಯೆ, ಸ್ತ್ರೀ-ಪುರುಷ ಪ್ರೇಮವಿವಾಹಕ್ಕೆ ಯಂತ್ರ ಪೂಜೆ, ಮಾಟ-ಮಂತ್ರ ಸೇರಿದಂತೆ ಯಾವುದೇ ಸಮಸ್ಯೆಗಳಿದ್ದರೂ ಶೀಘ್ರ ಹಾಗೂ ಶಾಶ್ವತ ಪರಿಹಾರ ಶತಸಿದ್ಧ.
ಸಂಪರ್ಕಿಸಿರಿ: ಪಂ.ಪೊದುವಾಳ್ ಎಸ್.ಜಿ.ಅಣ್ಣಪ್ಪ ಕುಮಾರನ್, ಶ್ರೀಸಿದ್ಧಿವಿನಾಯಕ ದೇವಸ್ಥಾನ ಹತ್ತಿರ(ಮನೆ), ಹೊಸಪೇಟೆ, ವಿಜಯನಗರ ಜಿಲ್ಲೆ



ಮತದಾನ ಅನ್ನದಾನದಷ್ಟೇ ಶ್ರೇಷ್ಠ | ಆಯ್ಕೆ ನಿಮ್ಮದಾಗಿರಲಿ
HAMPI TIMES VIJAYANAGARA

# ವಿಎಸ್‌ಕೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ವಿವಿಧೆಡೆ ಮತದಾನ ಜಾಗೃತಿ

**ಹಂಪಿ ಟೈಮ್ಸ್ ಬಳ್ಳಾರಿ**

ಮತದಾರರು ಮತದಾನ ಮಾಡುವ ಮೂಲಕ ತಮ್ಮ ಜವಾಬ್ದಾರಿಯನ್ನು ಪ್ರದರ್ಶಿಸಬೇಕು ಎಂದು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಗಳಾದ ಪ್ರೊ.ತಿಪ್ಪೇರುದ್ರಪ್ಪ.ಜೆ ಅವರು ಹೇಳಿದರು.

ವಾಣಿಜ್ಯಶಾಸ್ತ್ರ ಅಧ್ಯಯನ ಹಾಗೂ ಪ್ರದರ್ಶನ ಕಲೆ ವಿಭಾಗದ ಸಹಯೋಗದೊಂದಿಗೆ ಮಂಗಳವಾರ ವಿಶ್ವವಿದ್ಯಾಲಯದ ಆವರಣದಲ್ಲಿ 'ಮತದಾನ ಜಾಗೃತಿ' ಜಾಥಾಗೆ ಚಾಲನೆ ನೀಡಿ ಮಾತನಾಡಿದರು.

ವಿಶ್ವವಿದ್ಯಾಲಯದ ಕುಲಸಚಿವರಾದ ಎಸ್.ಎನ್.ರುದ್ರೇಶ್ ಅವರು ಮಾತನಾಡಿ, ಮತದಾನದ ಪ್ರಮಾಣ ಹೆಚ್ಚಿಸಲು ಮತದಾನ ಜಾಗೃತಿ ಅಭಿಯಾನಗಳು ಅವಶ್ಯಕ ಎಂದರು.

ವಾಣಿಜ್ಯಶಾಸ್ತ್ರ ವಿಭಾಗ ಮುಖ್ಯಸ್ಥರಾದ ಪ್ರೊ.ಸದ್ಯೋಜಾತಪ್ಪ.ಎಸ್ ಅವರು ಮಾತನಾಡಿ, ಮತದಾರರು ಯಾವುದೇ ಆಮಿಷಕ್ಕೆ ಒಳಗಾಗದೇ ಮತದಾನ ಮಾಡುವಂತೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ವಿವಿಯ ವಿದ್ಯಾರ್ಥಿಗಳು ಮತದಾನದ ಪ್ರಾಮುಖ್ಯತೆ ಕುರಿತು ಜನರಲ್ಲಿ ಮತದಾನದ ಅರಿವು ಮೂಡಿಸಲು ಜಾಥಾವನ್ನು ನಗರದ ಹಲವಾರು ಪ್ರದೇಶಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಚುನಾವಣೆಯ ಕುರಿತು ಗೌತಮ ನಗರದಲ್ಲಿ ಬೀದಿ ನಾಟಕ ಪ್ರದರ್ಶನ ಮಾಡಲಾಯಿತು. 100 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜಾಥಾದಲ್ಲಿ ಭಾಗವಹಿಸಿ ಮತದಾನ ಮಾಡುವ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಜೀಲಾನ್ ಬಾಷಾ, ಪ್ರೊ.ಭೀಮನಗೌಡ, ಡಾ.ಸಿದ್ದಪ್ಪ, ಡಾ.ರಾಘವೇಂದ್ರ, ಡಾ.ಜ್ಯೋತಿಲಿಂಗ, ನಾಟಕ ವಿಭಾಗದ ಅತಿಥಿ ಉಪನ್ಯಾಸಕರುಗಳಾದ ಡಾ.ಅಣ್ಣಾಜಿ ಕೃಷ್ಣಾರೆಡ್ಡಿ, ಸಹನಾ ಪಿಂಜಾರ, ಹೇಮೇಶ್ವರ.ಕೆ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಇದ್ದರು.

# ಕುರುಗೋಡು: ಬೆಟ್ಟ ಹತ್ತುವ ಮೂಲಕ ಮತದಾನ ಜಾಗೃತಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಮತ್ತು ಕುರುಗೋಡು ತಾಲ್ಲೂಕು ಆಡಳಿತ, ತಾಲ್ಲೂಕು ಸ್ವೀಪ್ ಸಮಿತಿ ಹಾಗೂ ಪುರಸಭೆ ಇವರ ಸಂಯುಕ್ತಾಶ್ರಯದಲ್ಲಿ ಲೋಕಸಭಾ ಸಾರ್ವತ್ರಿಕ ಚುನಾವಣೆ ಅಂಗವಾಗಿ ಕುರುಗೋಡು ಪಟ್ಟಣದ ಐತಿಹಾಸಿಕ ಬೆಟ್ಟ ಹತ್ತುವ ಮೂಲಕ ಮತದಾನ ಜಾಗೃತಿ ಕಾರ್ಯಕ್ರಮ ಬುಧವಾರ ಹಮ್ಮಿಕೊಳ್ಳಲಾಗಿತ್ತು. ತಾಲ್ಲೂಕು ಸ್ವೀಪ್ ನೋಡೆಲ್ ಅಧಿಕಾರಿ ಆಗಿರುವ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ನಿರ್ಮಲಾ.ಕೆ.ವಿ ಅವರು ಮಾತನಾಡಿ, ಮೇ 7 ರಂದು ನಡೆಯುವ ಲೋಕಸಭೆ ಚುನಾವಣೆಗೆ ಯಾವುದೇ ಆಸೆ-ಆಮೀಷಗಳಿಗೆ ಒಳಗಾಗದೇ ಎಲ್ಲರೂ ತಪ್ಪದೇ ಮತದಾನ ಮಾಡಬೇಕು ಎಂದು ಕರೆ ನೀಡಿದರು.ಮತದಾನವನ್ನು ನಮ್ಮ ಸಂವಿಧಾನ ನಮಗೆ ನೀಡಿರುವ ಅತ್ಯಮೂಲ್ಯ ಹಕ್ಕು. ತಪ್ಪದೇ ಮತದಾನದ ಕರ್ತವ್ಯದಲ್ಲಿ ಭಾಗಿಯಾಗಿ ನಮ್ಮ ಹಕ್ಕನ್ನು ಚಲಾಯಿಸೋಣ. ಇತರರನ್ನು ತಪ್ಪದೇ ಮತದಾನ ಮಾಡುವಂತೆ ತಿಳಿಸೋಣ ಎಂದರು. ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತ್, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಭಾಗವಹಿಸಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಚೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
**Contact for EVENT COVERAGE & Advertisements in Leading News Paper**
**9448633038**

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಸುಜ್ಞಾನಮೂರ್ತಿ

ಸುಜ್ಞಾನಮೂರ್ತಿ ಎಂದೊಡನೆ ಕಣ್ಣೆದುರು ಬರುವ ಚಿತ್ರವೆಂದರೆ-ಜೋಳದದಂಟಿನಂತೆ ಸಣ್ಣಗೆ ಉದ್ದಕ್ಕಿರುವ ಕಪ್ಪುದೇಹ; ನೀಟಾಗಿ ಧರಿಸಿದ ಡ್ರೆಸ್ಸು; ಮುಖದಲ್ಲಿ ಕೀಟಲೆಯ ನಗು. ಅವರಿದ್ದಲ್ಲಿ ತಮಾಶೆ-ನಗು ಸಾಂಕ್ರಾಮಿಕ. ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ ಸಹಾಯಕ ನಿರ್ದೇಶಕರಾಗಿದ್ದ ಅವರು, ನನಗೆ ಮೂವತ್ತು ವರ್ಷಗಳ ಸಹೋದ್ಯೋಗಿ. ಅಧ್ಯಾಪಕ ಹುದ್ದೆಗೆ ಬರುವ ಅವಕಾಶವಿದ್ದರೂ, ಅವರು ಬೋಧಕೇತರ ಹುದ್ದೆಯನ್ನು ಯಾಕೆ ಆರಿಸಿಕೊಂಡರೊ ತಿಳಿಯದು. ಬಹುಶಃ ಪಾಠ- ಬರವಣಿಗೆ ಅವರಿಗೆ ಇಷ್ಟದ ಕೆಲಸವಾಗಿರಲಿಕ್ಕಿಲ್ಲ. ಆದರೆ ಅತ್ಯುತ್ತಮವಾದ ಸಾಹಿತ್ಯವನ್ನು ಹುಡುಕಿ ಓದುವುದರಲ್ಲಿ ಅವರೊಬ್ಬ ಮಹಾನ್ ಓದುಗ.

ಸುಜ್ಞಾನ್, ತೀವ್ರ ಇಷ್ಟಾನಿಷ್ಟಗಳನ್ನು ಹೊಂದಿರುವ ವಿಶಿಷ್ಟ ವ್ಯಕ್ತಿ. ಉಡುವ ಬಟ್ಟೆ, ನೋಡುವ ಸಿನಿಮಾ, ಓದುವ ಪುಸ್ತಕ, ಉಣ್ಣುವ ಊಟ, ಕೇಳುವ ಸಂಗೀತ, ಮಾತಾಡುವ ವ್ಯಕ್ತಿ, ಕಟ್ಟುವ ಮನೆ- ಏನೇಯಿರಲಿ, ಮೆಚ್ಚುವ-ತಿರಸ್ಕರಿಸುವ ಎರಡು ಖಚಿತ ತುದಿಗಳಲ್ಲೇ ಪ್ರತಿಕ್ರಿಯಿಸುವವರು. ಇವೆರಡರ ನಡುವಿನ ಮಧ್ಯಮ ಮಾರ್ಗವೊಂದು ಅವರಲ್ಲಿದ್ದಂತಿಲ್ಲ. ಅವರು ಬದುಕಿನಲ್ಲಿ ಎಚ್ಚರಿಕೆಯಿಂದ ಕೆಲವು ಅಭಿರುಚಿಗಳನ್ನು ರೂಢಿಸಿಕೊಂಡಿದ್ದಾರೆ. ಕೈಬರೆಹವೂ ಅಷ್ಟೆ. ಅದು ಕಪ್ಪುಶಾಯಿಯ ಪೆನ್ನಲ್ಲೇ ಆಗಬೇಕು. ಶರ್ಟನ್ನು ಹೀಗೇ ಹೊಲಿದಿರಬೇಕು. ನಿರ್ದಿಷ್ಟ ಅಕ್ಷರಗಳ ಫಾಂಟುಗಳೇ ಇರಬೇಕು. ಮುದ್ರಣದ ಕಾಗದದ ಗುಣಮಟ್ಟ ಹೀಗೇ ಇರಬೇಕು. ಬಣ್ಣಗಳ ವಿಷಯದಲ್ಲೂ ಹಾಗೇ. ಹಿಂದೂಸ್ತಾನಿ ಸಂಗೀತವೆಂದರೆ ಆಗದು. ದೈವೀಕರಣಕೊಂಡಿರುವ ಕೆಲವು ಪ್ರಸಿದ್ಧ ನಟರ ನಟನೆಯೆಂದರೆ ಅಲರ್ಜಿ. ಬದುಕಿನಲ್ಲಿ ಎಲ್ಲ ವಿಷಯಗಳಲ್ಲಿ ಅವರಿಗೊಂದು ಆಯ್ಕೆಯಿದೆ. ಅದರೊಳಗೊಂದು ಅವರದ್ದಾದ ಏಸ್ತೆಟಿಕ್ಸ್ ಇದೆ. ಅವರ ಈ ವೈಯಕ್ತಿಕ ವಿಶಿಷ್ಟ ಗುಣಗಳೇ, ಕನ್ನಡ ಪುಸ್ತಕ ಜಗತ್ತಿನಲ್ಲಿ ಅಪರೂಪದ ಪುಸ್ತಕ ವಿನ್ಯಾಸಗಾರರಾಗಲು ಕಾರಣವಾಗಿರಬೇಕು. ಅವರ ಮನೆ ಹೆಸರೂ 'ವಿನ್ಯಾಸ'!



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಕನ್ನಡದಲ್ಲಿ ಪುಸ್ತಕಗಳು ದೊಡ್ಡ ಪ್ರಮಾಣದಲ್ಲಿ ಪ್ರಕಟವಾಗುತ್ತಿವೆ. ಮಾತ್ರವಲ್ಲ, ಅವು ಸುಂದರವಾಗಿ ಕೂಡ ಹೊರಬರುತ್ತಿವೆ. ನಾವು ಇಷ್ಟಪಡುವ ಹಿರಿಯ ತಲೆಮಾರಿನ ಅನೇಕ ಲೇಖಕರ ಶ್ರೇಷ್ಠ ಕೃತಿಗಳ ಮೊದಲ ಮುದ್ರಣಗಳನ್ನು ನೋಡಿದರೆ, ಸೋಜಿಗವೂ ಬೇಸರವೂ ಆಗುತ್ತದೆ. ಎಷ್ಟು ಸರಳ, ಸಪ್ಪೆ ಮತ್ತು ನಿರಲಂಕಾರ! ಅವನ್ನು ಚಂದವಾಗಿಡುವ ಸೌಲಭ್ಯಗಳೂ ಆಗ ಬಹುಶಃ ಲಭ್ಯವಿರಲಿಲ್ಲ. ಆದರೆ ಈಗ ಪ್ರಕಟವಾಗುತ್ತಿರುವ ಪುಸ್ತಕಗಳನ್ನು ಓದುವ ಮೊದಲು, ಸುಮ್ಮನೆ ಕೈಯಲ್ಲಿ ಹಿಡಿದು ಹಾಳೆ ತಿರುವುತ್ತ ಸಂತೋಷಪಡಬೇಕು ಅನಿಸುತ್ತದೆ. ನಮಗೆ ಸಿನಿಮಾ ಎಂದೊಡನೆ ಅದರ ನಾಯಕ ನಾಯಕಿಯರು ನೆನಪಾಗುತ್ತಾರಷ್ಟೆ. ಆದರೆ ಛಾಯಾಚಿತ್ರಗಾರರು, ಸಂಗೀತ ನಿರ್ದೇಶಕರು, ಚಿತ್ರಕಥೆ ಬರೆದವರು, ಗೀತರಚನಕಾರರು, ಗಾಯಕರು, ಧ್ವನಿಮುದ್ರಕರು, ನಿರ್ದೇಶಕರು ಕೂಡಿ ಸಂಭವಿಸುವ ಪವಾಡವದು. ಇದರಂತೆ ಲೇಖಕರು, ಮುಖಪುಟದ ಚಿತ್ರಕಲಾವಿದರು, ಪುಸ್ತಕದ ವಿನ್ಯಾಸಗಾರರು, ಮುದ್ರಕರು ಒಗ್ಗೂಡಿ ಪುಸ್ತಕಗಳ ಚೆಲುವಿಗೆ ಕಾರಣಕರ್ತರಾಗಿದ್ದಾರೆ.


ಸುಜ್ಞಾನ್, ನನ್ನ ಅನೇಕ ಪುಸ್ತಕಗಳನ್ನು ವಿನ್ಯಾಸಗೊಳಿಸಿದರು. ಮೊದಲಿಗೆ ಪಲ್ಲವ ವೆಂಕಟೇಶ್ ಪ್ರಕಟಿಸಿದ 'ಅಮೀರಬಾಯಿ ಕರ್ನಾಟಕಿ' ಕೃತಿಗೆ ಅರುಣ್ ಮುಖಪುಟ ಮಾಡಿದರು. ಪುಟವಿನ್ಯಾಸ ಸುಜ್ಞಾನ್ ಅವರದು. ಅದಕ್ಕೆ 'ಪುಸ್ತಕಸೊಗಸು' ಪ್ರಶಸ್ತಿಯೂ ಲಭಿಸಿತು. ಓದುಗರು ಪುಸ್ತಕ ಕೈಯಲ್ಲಿ ಹಿಡಿದಾಗ ಕೇವಲ ಲೇಖಕರನ್ನಲ್ಲ, ಅದರ ಉತ್ಪಾದನೆಯ ಹಿಂದೆ ದುಡಿದಿರುವ ಅನೇಕರ ಪ್ರತಿಭೆಗಳನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುವಂತೆ ಪುಸ್ತಕವು ಒಂದು ಕೂಡುಸೃಷ್ಟಿ.ಸುಜ್ಞಾನ್ ಅವರು ಅಕ್ಷರಜೋಡಣೆ ಮಾಡುವ ಕಂಪ್ಯೂಟರಿನ ಹುಡುಗರ ಹಿಂದೆ ಕುಳಿತು, ಸರಿರಾತ್ರಿಯ ತನಕ ಊಟನಿದ್ರೆಗಳ ಪರಿವೆಯಿಲ್ಲದೆ ಒಳಪುಟಗಳ ವಿನ್ಯಾಸ ಮಾಡುವುದನ್ನು ಕಂಡಿರುವೆ; ಸಾಹಿತ್ಯ ಸಮ್ಮೇಳನಕ್ಕೆ ಬಿಡುಗಡೆಯಾಗಬೇಕೆಂದು, 'ಕತ್ತಿಯಂಚಿನ ದಾರಿ'ಯ ಲೇಔಟನ್ನು ಕಲ್ಲುನೀರು ಕರಗುವ ಹೊತ್ತಿಗೆ ಮುಗಿಸಿಕೊಂಡು,ಕಾಮಲಾಪುರದಿಂದ ನಾವಿಬ್ಬರೂ ಬಂದಿದ್ದು ನೆನಪಾಗುತ್ತಿದೆ. ಅವರು ಯಾವುದೇ ಪುಸ್ತಕ ಹಿಡಿದೊಡನೆ ಅದರ ವಿನ್ಯಾಸದ ಚೆಲುವು-ದೋಷಗಳನ್ನು ತಟ್ಟನೆ ಗುರುತಿಸಿ ಚರ್ಚಿಸುತ್ತಾರೆ. ಅದೊಂದು ವಿಶೇಷ ಕುಶಲತೆ ಮತ್ತು ಪರಿಣತಿಯ ಕ್ಷೇತ್ರವೆಂದು ನನಗೆ ತಿಳಿದಿದ್ದೇ ಆಗ. ಕನ್ನಡದ ಅನೇಕ ಪುಸ್ತಕಗಳು ಸುಂದರವಾಗಿರಲು ಸುಜ್ಞಾನಮೂರ್ತಿ ಅವರಂತಹ ತೆರೆಮರೆಯಲ್ಲೇ ಉಳಿದುಬಿಡುವ ಸೌಂದರ್ಯಪ್ರಜ್ಞೆಯ ವಿನ್ಯಾಸಗಾರರು ಕಾರಣರು.

ನನಗೆ ನಿಜವಾಗಿಯೂ ಹೇಳಬೇಕಾಗಿರುವುದು ಸುಜ್ಞಾನ್ ಎರಡು ವಿಶಿಷ್ಟ ಸಾಧನೆಗಳ ಬಗ್ಗೆ.

ಮೊದಲನೆಯದಾಗಿ- ಅವರ ಓದುಗಾರಿಕೆ. ಅನೇಕ ಪ್ರಾಧ್ಯಾಪಕರೂ ಮಾಡದಷ್ಟು ಓದನ್ನವರು ಮಾಡಿ ಪೂರೈಸಿದ್ದಾರೆ. ಪುಸ್ತಕದಲ್ಲಿರುವ ಬರೆಹವು ಯಾವುದೇ ಪ್ರಕಾರದಲ್ಲಿರಲಿ, ಅದು ಕಳಪೆಯೊ ಶ್ರೇಷ್ಠವೊ ಹೇಳಿಬಿಡುತ್ತಾರೆ. ಸಂತೋಷ ಮತ್ತು ಹೊಸತಿಳಿವನ್ನು ಕೊಡದ ಬರೆಹದ ಬಗ್ಗೆ ಅವರಿಗೆ ಕಟುವಾದ ಧೋರಣೆಗಳಿವೆ. ಜಟಿಲವಾದ ಸಂವಹನ ಕಷ್ಟಕೊಡುವ ವಾಕ್ಯರಚನೆಗಳೆಂದರೆ ಕಿಡಿಕಿಡಿ. ಮನಬಂದಂತೆ ಕರಡುತಿದ್ದುವ ಲೇಖಕರ ಬಗ್ಗೆ ಅವರು ಸೃಷ್ಟಿಸಿರುವ ಹೀನೋಪಮೆಗಳನ್ನು ಹೇಳಬಾರದು. ಕೇಳಬಾರದು. ಅವರಿಗಿರುವ ವಿಡಂಬನ ಪ್ರಜ್ಞೆಯು ಬರಹವಾಗಿ ಬದಲಾಗಿದ್ದರೆ, ಅವರೊಬ್ಬ ಜನಪ್ರಿಯ ಲೇಖಕರಾಗಿರುತ್ತಿದ್ದರು. ಕಿರಂ ಶಿಷ್ಯರಾದರೂ ಅವರು ಕಾವ್ಯವನ್ನು ಮೆಚ್ಚಿ ಮಾತಾಡಿದ್ದು ನಾನು ಕೇಳಿಲ್ಲ. ಅವರು ಮುದ್ದಣನಂತೆ ಪದ್ಯಂ ವದ್ಯಂ, ಗದ್ಯಂ ಹೃದ್ಯಂ. ಅವರ ಇಷ್ಟದ ಪ್ರಕಾರ ಲಲಿತಪ್ರಬಂಧ. ಅದರಲ್ಲೂ ಅವರ ಪ್ರಿಯ ಪ್ರಬಂಧಕಾರ ರಾಕು. ಅದರಲ್ಲೂ ಅವರ 'ಗಾಳಿಪಟ'ವೆಂಬ ಪ್ರಬಂಧ. ಈ ಶ್ರೇಷ್ಠ ಪ್ರಬಂಧದ ಸಾಲುಸಾಲುಗಳನ್ನೆಲ್ಲ ಅವರು ನೆನಪಿಟ್ಟಿದ್ದಾರೆ. ಅವರು ಕನ್ನಡದ ಅತ್ಯುತ್ತಮ ಲಲಿತ ಪ್ರಬಂಧಗಳ ಬಗ್ಗೆ ಎದೆಹಿಗ್ಗಿನಿಂದ, ಮೊಗವರಳಿಸಿಕೊಂಡು ಕಣ್ಣ ಹೊಳಪಿಸಿಕೊಂಡು ಮಾತಾಡಿದ್ದನ್ನು ನೂರು ಸಲ ಆಲಿಸಿರುವೆ. ನಾನೂ ಲಲಿತಪ್ರಬಂಧ ಪ್ರಕಾರ ಇಷ್ಟಪಡುವನಾದ ಕಾರಣ, ಇಬ್ಬರೂ ಸೇರಿದಾಗ ಕನ್ನಡದ ಅತ್ಯುತ್ತಮ ಲಲಿತ ಪ್ರಬಂಧಗಳ ಸ್ವಾರಸ್ಯಕರ ಸನ್ನಿವೇಶಗಳನ್ನು ನೆನೆಯುತ್ತ ಸಂತೋಷಪಡುವುದುಂಟು. ಆಗ ನಮ್ಮ ಚರ್ಚೆಯಲ್ಲಿ ವಿಮರ್ಶೆಯಿಲ್ಲ; ಮೌಲ್ಯಮಾಪನವಿಲ್ಲ. ಮಕ್ಕಳು ತಮಗೆ ಇಷ್ಟವಾದ ತಿಂಡಿಯನ್ನು ಸವಿವಾಗ ಪಡುವ ಸುಖವದು. ಎಂತಲೇ ನೂರಾರು ಜನ ಪಿಎಚ್.ಡಿ,. ಮಾಡುವ ಜಾಗದಲ್ಲಿದ್ದರೂ, ಅವರು ಅಪಾರ ಓದುಗಾರಿಕೆಯಿರುವ ಲಲಿತ ಪ್ರಬಂಧಗಳ ಮೇಲೆ ಸಂಶೋಧನೆ ಮಾಡಲಿಲ್ಲ. ಚಿಂತೆಯಿಲ್ಲ. ಆದರೆ ಅವರು ತಮ್ಮ ಇಷ್ಟದ ಲಲಿತಪ್ರಬಂಧಗಳನ್ನು ಆರಿಸಿ, ಒಂದು ಸಂಕಲನ ಮಾಡಬೇಕು ಎಂದು ಆಗ್ರಹಿಸಬಹುದು.

ಎರಡನೆಯದಾಗಿ-ಅವರ ಅನುವಾದಗಳು. ಇದು ಅವರು ಕನ್ನಡಕ್ಕೆ ಸದ್ದಿಲ್ಲದೆ ಮಾಡಿರುವ ದೊಡ್ಡ ಉಪಕಾರವೆಂದೇ ನನ್ನ ಭಾವನೆ. ತೆಲುಗಿನಿಂದ ಅವರು ಮೂರು ದಶಕಗಳಿಂದ ನಿರಂತರ ಅನುವಾದ ಮಾಡುತ್ತಿದ್ದಾರೆ. ಅದರಲ್ಲಿ ಮುಖ್ಯವಾದುದು ವಿಚಾರಸಾಹಿತ್ಯ. ಈ ವಿಚಾರ ಸಾಹಿತ್ಯದ ಅನುವಾದ ಮೂರು ಕಾರಣಗಳಿಂದ ಮಹತ್ವದ್ದಾಗಿದೆ.

1. ಇಂಗ್ಲೀಶಿನ ಮಧ್ಯಸ್ಥಿಕತೆಯಿಲ್ಲದೆ ನೇರವಾಗಿ ತೆಲುಗಿನಿಂದ ಕನ್ನಡಕ್ಕೆ ಬರುತ್ತಿರುವುದು. ಭಾರತದ ಎರಡು ದೇಶೀ ಭಾಷೆಗಳ ನಡುವೆ ಹೀಗೆ ನಡೆವ ವಿನಿಮಯದಲ್ಲಿ, ಮೂಲದ ಸಾಂಸ್ಕೃತಿಕ ಸಂವೇದನೆಗಳು ಹೆಚ್ಚು ಮುರುಟದೆ ಕನ್ನಡಕ್ಕೆ ಆಗಮಿಸುತ್ತವೆ. ಕನ್ನಡದಲ್ಲಿ ಹೀಗೆ ಒಂದುಕಾಲಕ್ಕೆ ಮೂಲದಿಂದ ನೇರವಾಗಿ ಕನ್ನಡಕ್ಕೆ ಅನುವಾದಗೊಳ್ಳುತ್ತಿದ್ದುದು ಬಂಗಾಳಿ ಸಾಹಿತ್ಯ. ಈ ಪರಂಪರೆ ಈಚಿನವರೆಗೂ- ನನ್ನ ಮಿತ್ರ ಕುಮಾರಪ್ಪನವರು ನಿಧನರಾಗುವವರೆಗೂ- ಮುಂದುವರೆಯಿತು. ಈಗ ನಾಗ ಹುಬ್ಳಿ ಇದ್ದಾರೆ. ಆದರೆ ಮರಾಠಿ, ತಮಿಳು, ಮಲೆಯಾಳ ತೆಲುಗುಗಳಿಂದ ಮಾತ್ರವಲ್ಲ, ಒರಿಯಾದಿಂದಲೂಈಗ ನೇರವಾಗಿ ಅನುವಾದ ಮಾಡುವವರಿದ್ದಾರೆ- ಅಂಗ್ರೇಜಿಯ ಮಧ್ಯಂತರದ ಹಂಗಿಲ್ಲದೆ.




2. ಯಾವುದೇ ಭಾಷೆಯಿಂದ ಹೆಚ್ಚಾಗಿ ಅನುವಾದಗೊಳ್ಳುವುದು ಕಥೆ ಕಾದಂಬರಿಗಳು. ವಿಚಾರ ಸಾಹಿತ್ಯವಲ್ಲ. ಸುಜ್ಞಾನ್, ತೆಲುಗಿನಿಂದ ಕನ್ನಡಕ್ಕೆ ತರುತ್ತಿರುವುದು ಅಪರೂಪದ ವಿಚಾರ ಸಾಹಿತ್ಯವನ್ನು. ಕನ್ನಡದಲ್ಲಿ ಹೀಗೆ ನಿರ್ದಿಷ್ಟ ಪ್ರಕಾರವನ್ನು ನೆಮ್ಮಿ ಅನುವಾದ ಮಾಡಿದವರು ಕಡಿಮೆ. ಅವರಿಂದ ಕಾಂಚ ಐಲಯ್ಯ, ರಂಗನಾಯಕಮ್ಮ ಮುಂತಾದ ತೆಲುಗಿನ ವಿಶಿಷ್ಟ ಚಿಂತಕರು ಕನ್ನಡಕ್ಕೆ ಬಂದರು. ಅವರ ಅನುವಾದಗಳಲ್ಲೆಲ್ಲ ಪಿ. ಸುಂದರಯ್ಯನವರ 'ತೆಲಂಗಾಣ ಹೋರಾಟ' ಬಹಳ ಮಹತ್ವದ್ದು.

3. ಈ ವಿಚಾರ ಸಾಹಿತ್ಯವು ಅನುವಾದಗೊಳ್ಳುತ್ತಿರುವ ಚಾರಿತ್ರಿಕ ಪ್ರಸ್ತುತತೆ. ಸದ್ಯ, ಭಾರತವನ್ನು ಮತೀಯ ಉನ್ಮಾದ ಆವರಿಸಿಕೊಂಡಿದೆ; ವಿಮರ್ಶೆ-ವಿವೇಚನೆಯಿಲ್ಲದೆ ವ್ಯಕ್ತಿ ಮತ್ತು ಸಿದ್ಧಾಂತಗಳ ಆರಾಧನೆ ನಡೆದಿದೆ; ವೈಚಾರಿಕವಾಗಿ ಚಿಂತಿಸುವುದು ಮಾತನಾಡುವುದು ಬರೆಯುವುದು ಅಪರಾಧದಂತಾಗಿದೆ; ವಿಚಾರ-ವಿಚಾರವಾದಿ ಚಿಂತನೆ-ಚಿಂತಕ ಶಬ್ದಗಳು ನೇತ್ಯಾತ್ಮಕವಾದ ಕುರೂಪೀಕರಣದ ಪರಿಕಲ್ಪನೆಗಳಾಗಿ ಹೋಗಿವೆ. ಇದರ ಭಾಗವಾಗಿಯೇ ಧಾಬೋಲ್ಕರ್, ಪನ್ಸಾರೆ, ಕಲಬುರ್ಗಿ, ಗೌರಿಯವರ ದಾರುಣ ಕೊಲೆಗಳು ಘಟಿಸಿದವು. ಸ್ವತಂತ್ರವಾಗಿ ವಿಚಾರ ಮಾಡುವುದಕ್ಕೂ ಅಭಿವ್ಯಕ್ತಿಸುವುದಕ್ಕೂ ಒದಗಿರುವ ಬಿಕ್ಕಟ್ಟಿನ ಕಾಲವಿದು. ಒಂದು ಬಗೆಯಲ್ಲಿ ಸಮಾಜದ ಪತನದ ಕಾಲ ಕೂಡ.

ಇಂತಹ ಸಂದರ್ಭದಲ್ಲಿ ಸುಜ್ಞಾನ್, ವಿಚಾರಸಾಹಿತ್ಯವನ್ನು ಶ್ರದ್ಧೆಯಿಂದ ತರುತ್ತಿದ್ದಾರೆ. ಇದು ಪ್ರವಾಹದ ವಿರುದ್ಧ ಈಜು. ಈ ಈಜನ್ನು ನಮ್ಮ ಹಿರೀಕರು ಹಿಂದೆಯೇ ಆರಂಭಿಸಿದ್ದರು. ನರಸಿಂಹಯ್ಯನವರು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಕಾಲದಲ್ಲಿ, ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಜಿ.ಎಸ್.ಶಿವರುದ್ರಪ್ಪನವರು, ಕುವೆಂಪು ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' 'ವಿಚಾರಕ್ರಾಂತಿಗೆ ಆಹ್ವಾನ'ಗಳ ಪ್ರೇರಣೆಯಿಂದ ವಿಚಾರಸಾಹಿತ್ಯ ಎಂಬ ಪುಸ್ತಕಗಳನ್ನು ಪ್ರಕಟಿಸಿದ್ದರು. ಅವನ್ನು ಪಠ್ಯಪುಸ್ತಕವಾಗಿಸಿದ್ದರು ಕೂಡ. ಈ ಪುಸ್ತಕಗಳ ದೆಸೆಯಿಂದ ನೂರಾರು ವಿದ್ಯಾರ್ಥಿಗಳು ವೈಚಾರಿಕತೆಯನ್ನು ಬೆಳೆಸಿಕೊಂಡರು. ಈ ಕೆಲಸವನ್ನು ಸುಜ್ಞಾನರ ಅನುವಾದಗಳು ಮುಂದುವರೆಸುತ್ತಿವೆ. ಅವರು ವ್ರತದ ಹಾಗೆ ಕೈಗೆತ್ತಿಕೊಂಡಿರುವ ಈ ಕೆಲಸ ಮಹತ್ವವನ್ನು ಪ್ರಜ್ಞಾವಂತ ಕನ್ನಡಿಗರು ಖಂಡಿತವಾಗಿಯೂ ಒಂದುದಿನ ಮನಗಾಣುವರು. ಮುಂದಿನ ದಿನಗಳಲ್ಲಿ ನಮ್ಮನ್ನು ಆವರಿಸುತ್ತಿರುವ ತಮಂಧದ ಕೇಡನ್ನು ತೊಡೆಯುವ ಸಾಹಿತ್ಯವು ಅವರಿಂದ ಬರುತ್ತದೆ ಎಂದು ನನಗೆ ನಂಬಿಕೆಯಿದೆ.

# ಸಿಡಿಲಿನಿಂದ ತಪ್ಪಿಸಿಕೊಳ್ಳಲು ಜಿಲ್ಲಾಡಳಿತದ ಸಲಹೆ

**ಹಂಪಿ ಟೈಮ್ಸ್ ಹೊಸಪೇಟೆ**

ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಮಿಂಚು ಹಾಗೂ ಗುಡುಗು ಉದ್ಭವಿಸಿ ಸಿಡಿಲಿನಿಂದ ತಪ್ಪಿಸಿಕೊಳ್ಳಲು ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿಸುತ್ತಿದ್ದು ಸಾರ್ವಜನಿಕರು ಇವುಗಳನ್ನು ಪಾಲನೆ ಮಾಡಬೇಕು ಎಂದು ವಿಜಯನಗರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ಎಂ. ಎಸ್.ದಿವಾಕರ ಅವರು ತಿಳಿಸಿದ್ದಾರೆ.


ಸಿಡಿಲು ಬೀಳುವ ಸಮಯದಲ್ಲಿ ಟಿವಿ ನೋಡಬಾರದು, ಶವರ್ ಕೆಳಗಡೆ ಸ್ನಾನ ಮಾಡುದಾಗಲಿ, ನಲ್ಲಿಯಿಂದ ಬರುವ ನೀರಿನಿಂದ ಕೈತೊಳೆಯುವುದಾಗಲಿ ಮತ್ತು ಪಾತ್ರೆಗಳನ್ನು ತೊಳೆಯುವುದಾಗಲಿ ಮಾಡಬಾರದು, ಮಳೆಬೀಳುವ ಸಮಯದಲ್ಲಿ ಕಿಟಕಿ ಬಾಗಿಲಲ್ಲಿ ನಿಲ್ಲಬಾರದು., ಮಳೆ ಸಿಡಿಲು ಬೀಳುವ ಸಮಯದಲ್ಲಿ ಎಲ್ಲ ಬಾಗಿಲುಗಳನ್ನು ಮುಚ್ಚಬೇಕು. ಮನೆಯ ಕಿಟಕಿಯ ಬಳಿ ನಿಲ್ಲುವುದಕ್ಕಿಂತಲೂಮನೆಯಮಧ್ಯದಲ್ಲಿರುವುದು ಸುರಕ್ಷಿತ., ಸಿಡಿಲು ಬಡಿಯುವ ಸಮಯದಲ್ಲಿ ಮಳೆಯಲ್ಲಿ ನೆನೆದರೂ ಪರವಾಗಿಲ್ಲ ಛತ್ರಿಯನ್ನು ಬಳಸಬಾರದು., ಗುಡುಗು-ಮಿಂಚು ಬರಲಿದೆ ಎಂದು ಗೊತ್ತಾದಾಗ ಹೊಲದಲ್ಲಿದ್ದರೆ ಹತ್ತಿರದಲ್ಲಿರುವ ಯಾವುದೇ ಕಟ್ಟಡದಲ್ಲಿ ಅಥವಾ ಪಂಪ್‌ಹೌಸ್‌ನಲ್ಲಿ ಆಶ್ರಯ ಪಡೆಯಬೇಕು., ಒಂದು ವೇಳೆ ನೀವು ವಿಶಾಲವಾದ ಮೈದಾನದಲ್ಲಿದ್ದರೆ ಮರಗಳಿಂದ ದೂರವಿರಬೇಕು. ತಗ್ಗಿರುವ ಪ್ರದೇಶಗಳಲ್ಲಿ ಕುಳಿತು ತಲೆಯನ್ನು ಮೊಣಕಾಲಿನ ಮಧ್ಯೆ ಇರಿಸಿ, ಕಣ್ಣು, ಕಿವಿಮುಚ್ಚಿಕೊಳ್ಳಬೇಕು. ಏಕೆಂದರೆ ಸಿಡಿಲು ಬಡಿಯುವುದರಿಂದ ಆ ಬೆಳಕು ಮತ್ತು ಶಬ್ದದಿಂದ ಕಿವಿ ಮತ್ತು ಕಣ್ಣು ಹಾಳಾಗುವ ಸಾಧ್ಯತೆ ಇರುತ್ತದೆ., ನಮ್ಮನ್ನು ನಂಬಿರುವ ಮೂಕಪ್ರಾಣಿಗಳನ್ನು ಕಾಪಾಡುವ ಜವಾಬ್ದಾರಿ ಕೂಡ ನಮ್ಮದು. ಹಾಗಾಗಿ ಮನೆಯಲ್ಲಿರುವ ಹಸು, ಕುರಿ, ನಾಯಿಗಳು, ಸಾಕುಪ್ರಾಣಿಗಳನ್ನು ಶೆಡ್‌ನಲ್ಲಾಗಲಿ ಅಥವಾ ಮನೆಯಲ್ಲಾಗಲಿ ಇರಿಸಬೇಕು., ಕುರಿ ಮಂದೆ ಅಥವಾ ಜಾನುವಾರುಗಳ ಮಧ್ಯ ನಿಂತಿದ್ದರೆ ಅವುಗಳ ಮಧ್ಯದಲ್ಲಿ ಬಗ್ಗಿ ಕುಳಿತುಕೊಳ್ಳಬೇಕು. ಏಕೆಂದರೆ ಮಿಂಚು ಪ್ರಾಣಿಗಳಿಗಿಂತ ಎತ್ತರವಿರುವ ಮನುಷ್ಯನನ್ನೇ ಆರಿಸಿಕೊಳ್ಳುತ್ತದೆ., ಕೆರೆಯಲ್ಲಿ ಈಜುವುದು, ಸ್ನಾನ ಮಾಡುವುದು ಮಾಡಬಾರದು., ನೀರಿನಲ್ಲಿದ್ದರೆ ತಕ್ಷಣ ಹೊರಬರಬೇಕು., ವಿದ್ಯುತ್ ಕಂಬ, ಎಲ್‌ಕ್ಟ್ರಿಕಲ್ ಕಲ್ವರ್, ಮೊಬೈಲ್ ಟವರ್, ಟ್ರಾನ್ಸಫರ್ಮರ್ ಮುಂದಾವುಗಳ ಹತ್ತಿರ ಇರಬಾರದು., ತಂತಿ ಬೇಲಿ, ಬಟ್ಟೆ ಒಣ ಹಾಕುವ ತಂತಿಗಳಿಂದ ದೂರ ಇರಬೇಕು. ಏಕೆಂದರೆ ಇವು ದೂರದಿಂದಲೇ ಮಿಂಚನ್ನು ಸೆಳೆಯುತ್ತವೆ., ಮಳೆ ಬರುವ ಸಮಯದಲ್ಲಿ ಮನೆಯ ಟೆರೇಸನ್ನು ಸ್ವಚ್ಛ ಮಾಡುವ ಸಾಹಸ ಮಾಡಬಾರದು, ಗುಡುಗು-ಸಿಡಿಲಿನ ಸಂದರ್ಭದಲ್ಲಿ ದೂರವಾಣಿಯಲ್ಲಿ ಮೊಬೈಲನಲ್ಲ ಮಾತನಾಡಬಾರದು ಮತ್ತು ಮೊಬೈಲಗಳನ್ನು ಚಾರ್ಜ್‌ಗೆ ಸಹ ಹಾಕಬಾರದು., ಕಾರಿನಲ್ಲಿ ಪ್ರಯಾಣಿಸುತ್ತಿದ್ದರೆ ಗಾಜನ್ನು ಮುಚ್ಚಬೇಕು., ಕಾರಿನ ಬಾಡಿಯನ್ನು ಸಾಧ್ಯವಾದಷ್ಟು ಸ್ಪರ್ಶಿಸದೆ ಮಧ್ಯದಲ್ಲಿ ಕುಳಿತರೆ ಒಳ್ಳೆಯದು., ಕಂಪ್ಯೂಟರ್‌ಗಳಿಂದಲು ಸಹ



ದೂರ ಇರಬೇಕು. ಗಣಕಯಂತ್ರದಲ್ಲಿ ಕೆಲಸ ಮಾಡುವುದಿದ್ದರೆ ಮಿಂಚು ಕಡಿಮೆ ಆಗುವವರೆಗೆ ಕಂಪ್ಯೂಟರಗಳಿಂದ ದೂರವಿದ್ದು ಬಳಿಕ ಕೆಲಸ ಮಾಡಬೇಕು., ಯಾವುದೇ ಲೋಹದ ವಸ್ತುಗಳನ್ನು (ಉದಾ: ಕುಡುಗೋಲು, ಕೊಡಲಿ, ಹಾರೆ) ದೂರ ಇಡಬೇಕು. ಈ ರೀತಿ ಬೇರೆ ಬೇರೆ ಅಂಶಗಳನ್ನು ಸಾರ್ವಜನಿಕರು ಅರಿತು ಸಿಡಿಲಿನಿಂದ ತಪ್ಪಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

## ಕವಿ ಮನಸು

### ಬಾನ ಚಂದಿರ



ಬಾನಲಿ ಚಂದಿರ ಬೆಳಕನು ಚೆಲ್ಲಲು
ಭುವಿ ಕಡಲಿನ ತುಂಬಾ ಬಿಳಿ ಹಾಲು
ಹಾಡುತ ನಲಿದರು ನವ ಪ್ರೇಮಿಗಳು
ಸುಂದರ ಸಂಗೀತದ ಹೊನಲುಗಳು

ಹಿಮ ಬಿಂದುಗಳ ಸುರಿಯುತ ನಡೆದನು
ನೀಗಿಸೆ ಭುದೇವಿಯ ದಣಿವನ್ನು
ಹಗಲಿನ ಸೂರ್ಯನ ಪ್ರಖರವ ಇಳಿಸಲು
ಇರುಳಿಗೆ ಚಂದಿರನ ಆಗಮನ

ಮೊದಲ ಮಳೆಯದು ಇಳೆಯೋಳು
ಸುರಿದು ಬರಲು ಘಮ್ಮನೆ ಪರಿಮಳವು
ಪರಿಮಳದಲ್ಲೇ ಪುಳಕವು ವಸುಂದರೆಯು
ಮಧುರ ಮಿಲನವೇ ವಸಂತನಿಗೆ ಕರೆಯು

ಹಗಲಲಿ ಹಾರಾಡಿದ ಬಾನಾಡಿಗಳಿಗೆ
ಇರುಳಲಿ ಮಾಡಿವೆ ಸಿಹಿ ನಿದ್ರೆಗಳು
ಹಗಲು ಇರುಳು ಭೇದವೇ ಇಲ್ಲದೇ
ಹರಿಹರ ಹರಸಿದ ಶುಭಶಕುನಳು

– ಕೆ ಎಂ ಬಸವರಾಜ
ನಿವೃತ್ತ ಇಂಜಿನಿಯರ್, ಹೊಸಪೇಟೆ

## ಸುತ್ತ ಮುತ್ತ ಕುಂದು-ಕೊರತೆ

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ? ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು ಹಂಪಿ ಟೈಮ್ಸ್ ಪತ್ರಿಕೆ 9448633038 ವಾಟ್ಸಪ್ ನಂಬರ್ ಗೆ ಕಳುಹಿಸಿ.

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

### ಯುವ ಪೀಳಿಗೆಗೆ ಸ್ಫೂರ್ತಿ

# ವೈರಸ್ ಗೆದ್ದು ವೈದ್ಯೆಯಾದ ಅಮೃತಾ





No Story without RISK ಎನ್ನುವ ಮಾತಿನಂತೆಯಾವುದೇ ಕೆಲಸ ಇರಲಿ ಅದರಲ್ಲಿಅಪಾಯಇಲ್ಲದೇ ಹೋದರೆ ಅದೊಂದು ಕತೆಯಾಗಲು ಸಾಧ್ಯವೇ ಇಲ್ಲ. ಅದಕ್ಕೆ ತದ್ರೂಪಿ ಎನ್ನುವಂತೆ ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಪಿಂಜಾರ್ ಹೆಗ್ಡಾಳ್ ಗ್ರಾಮದಲ್ಲಿ ಮಲ್ಲಿಗೆ ಹೂವಿನ ತೋಟಗಳನ್ನು ಪೋಷಿಸಿಕೊಂಡು ವ್ಯವಸಾಯ ಕೇಂದ್ರೀಕರಿಸಿ ಕೊಂಡಿರುವ ಜೆ.ಎಂ.ಕವಿತಾ ಶ್ರೀ ಜೆ.ಎಂ.ರಾಜೇಂದ್ರ ಅವರು ಆರತಿಗೊಬ್ಬ ಮಗಳು, ಕೀರ್ತಿಗೊಬ್ಬ ಮಗ ಎನ್ನುವಂತೆ ಎರಡು ಮಕ್ಕಳಲ್ಲಿ ಮೊದಲನೇ ಮಗಳಾದ ಇವರು ಭವಿಷ್ಯದ ಆರತಿ ಬೆಳಗುತ್ತಾಳೆನ್ನುವ ಹಂಬಲದಲ್ಲೆ ಶಿಕ್ಷಣ ಕೊಡಿಸಲು ಪ್ರಾರಂಭಿಸಿದರು. ಬಾಲ್ಯವೆಲ್ಲವನ್ನು ಆಟ ಪಾಠದೊಂದಿಗೆ ಕಳೆಯಬೇಕಾದ ಮಗಳು ಆಸ್ಪತ್ರೆಯಲ್ಲೆ ಕಳೆಯಬೇಕಾದ ಸನ್ನಿವೇಶಗಳನ್ನು ಕಂಡಕುಟುಂಬ ಕುಗ್ಗಿ ಹೋಯಿತು. ಹಲವು ಕ್ಷೇತ್ರಗಳಲ್ಲಿ ಸದಾ ಹೋರಾಟಯುತಜೀವನ ನಡೆಸುತ್ತಿರುವಕುಟುಂಬ ಒಂದಿಂಚೂ ವಿಚಲಿತವಾಗದೇ ಸಂಪೂರ್ಣವಾಗಿ ಮಗಳ ಆರೈಕೆ ಮತ್ತು ಶಿಕ್ಷಣಕ್ಕೆ ಜೊತೆಜೊತೆಯಲ್ಲಿ ಹೆಗಲಿಗೆ ಹೆಗಲಾಗಿ ನಿಂತಿದ್ದು ಮಾತ್ರಯಶೋಗಾಥೆ.

ಮೊದಲ ಮಗಳು 12ನೇ ವಯಸ್ಸಿನಲ್ಲಿ ಆಕೆಗೆ ಜಿಬಿ ಸಿಂಡ್ರೋಮ್ ಎಂಬ ಕಾಯಿಲೆಗೆ ಒಳಗಾದರು. ಗುಯಿಲಿನ್-ಬಾರ್ರೆ ಸಿಂಡ್ರೋಮ್ (ಜಿಬಿಎಸ್) ಅಪರೂಪದ ಕಾಯಿಲೆಯಾಗಿದ್ದು, ದೇಹದ ಪ್ರತಿರಕ್ಷಣಾ ವ್ಯವಸ್ಥೆಯು ನರವನ್ನು ಹಾನಿಗೊಳಿಸುತ್ತದೆ. ನರಗಳಿಗೆ ಹಾನಿಯು ಸ್ನಾಯು ದೌರ್ಬಲ್ಯ ಮತ್ತುಪಾರ್ಶ್ವವಾಯುವಿಗೆ ಕಾರಣವಾಗುತ್ತದೆ. ಸಿಂಡ್ರೋಮ್ ವೈರಸ್ ಸಂಪೂರ್ಣವಾಗಿ ನರಗಳ ಮೇಲೆ ದಾಳಿ ಮಾಡುವ ಕಾಯಿಲೆ. ಈ ಕಾಯಿಲೆಗೆ ತುತ್ತಾದ ಇವರು, ಅಂದು 22 ದಿನಗಳ ಕಾಲ ವೆಂಟಿಲೇಟರನಲ್ಲಿ ಸಾವು ಬದುಲಿನ ಮಧ್ಯೆ ಹೋರಾಟ ಮಾಡಿ ಕೊನೆಯಸ್ಥಿತಿಯಲ್ಲಿದ್ದರು. ಅಲ್ಲಿ ಬದುಕುಳಿಯುವ ಸಾಧ್ಯತೆ ತುಂಬಾನೇ ಕಡಿಮೆಯಾಗಿತ್ತು. ಇವರಲ್ಲಿ ಅಚಲವಾದ ಸ್ವಯಂದೃಢತೆ, ಬದುಕುವ ಮನೋಭಾವವೇ ಬದುಕುಳಿಯಲು ಕಾರಣ.

ಸಾವನ್ನು ಜಯಿಸಿ ವೈದ್ಯರ ಸಲಹೆಯಂತೆ ಫಿಜಿಯೋತೇರಪಿ ಗಳಂತಹ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಸ್ವಯಂ ಕೆಲಸಗಳನ್ನು ನಿರ್ವಹಿಸಿ ಕೊಳ್ಳುವಲ್ಲಿಗೆ ಸಿದ್ಧರಾದರು. ಭಾರತ ದಲ್ಲಿ ಅತ್ಯಂತ ಪುರಾತನವಾದ ವೈದ್ಯಕೀಯ ಪದ್ಧತಿ ಆಯುರ್ವೇದ ಚಿಕಿತ್ಸೆಯ ಫಲಿತಾಂಶ ತಡವಾದರೂ ಫಲಿತಾಂಶ ಮಾತ್ರ ನಿಖರವಾಗಿರುತ್ತದೆ. ಈ ಆಯುರ್ವೇದ ಔಷಧಿಗಳು ಕೂಡ ಕಾಯಿಲೆಯಿಂದ ಎದ್ದು ಬರಲು ಸಹಾಯ ಮಾಡಿತು.



ಕೆ.ಎಂ.ಶಿವಶಂಕರಯ್ಯ,
ಹೆಚ್.ಬಿ.ಹಳ್ಳಿ ಮೊ:9449964777

Scan For Digital Colourful
HAMPI TIMES E-paper

ಇನ್ನು ವಿದ್ಯಾಭ್ಯಾಸದಲ್ಲಿ ಕಠಿಣ ಪರಿಶ್ರಮದಿಂದಾಗಿ ತೇರ್ಗಡೆ ಯಾಗುತ್ತಾ ತನ್ನಲಾದ ಅನಾರೋಗ್ಯಕರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ವೈದ್ಯಕೀಯ ಕ್ಷೇತ್ರದಲ್ಲಿ ಪ್ರಖ್ಯಾತಗೊಂಡಿರುವ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಸ್ವತಃ ಎಂಬಿಬಿಎಸ್ ಸೀಟ್ ಪಡೆದು ವೈದ್ಯಕೀಯ ಶಿಕ್ಷಣ ಪಡೆಯಲು ಪ್ರಾರಂಭಿಸಿದರು.

2022ರಲ್ಲಿ ಅಂತಿಮ ವರ್ಷದ ಓದುತ್ತಿದ್ದಾಗ ಇನ್ನೇನೂ ವೈದ್ಯಕೀಯ ಪದವಿ ಮುಗಿಯಿತು ಡಾಕ್ಟರ್ ಆದೇ ಅನ್ನುವಷ್ಟರಲ್ಲಿ ಹೋದ್ಯಾ ಪಿಶಾಚಿ ಅಂದ್ರೆ ಬಂದೆಗವಾಕ್ಷಿ ಅಂದಂಗೆ ಅದೇ ಜಿಬಿಸಿಂಡ್ರೋಮ್ ಕಾಯಿಲೆ ಮತ್ತೇ ಇವರ ಬದುಕಿನಲ್ಲಿ ಬಂದಪ್ಪಳಿಸಿತು.ಮತ್ತದೇ ಬೆಡ್ ಮೇಲೆ ಮಲಗುವ ಸ್ಥಿತಿ ಎದುರಾಗಿತು. ಇಷ್ಟೆಲ್ಲಾ ಅಡೆತಡೆಗಳನ್ನು ಸಹ ಎದುರಿಸಿ ಸತತ ಎಂಟೋಂಬತ್ತು ತಿಂಗಳು ಆಸ್ಪತ್ರೆಯ ಬೆಡ್ನಲ್ಲೆ ಓದು ಮುಂದುವರೆಸಿ ಮೊದಲಿನಂತೆ ಇಂದು ವೈಧ್ಯಕೀಯ ಶಿಕ್ಷಣದ ಗ್ರಾಜ್ಯುವೇಷನ್ ಮುಗಿಸಿದ ಡಾ. ಜೆ.ಎಂ.ಆರ್. ಅಮೃತಾ ನಮ್ಮೆದುರಿನ ಅಧ್ಯಾಯ.

ತೀವ್ರ ನಿಗಾ ಘಟಕದಲ್ಲಿಯೇ ಬಳಲುತ್ತಿದ್ದಾಗ ನನ್ನಕುಟುಂಬದ ಸ್ನೇಹಿತರಾದಿಯಾಗಿ ಹಲವರು ನನಗೋಸ್ಕರ ಕಷ್ಟಪಟ್ಟು ಶ್ರಮಸಿದ್ದಾರೆ. ನಾನು ನಮ್ಮ ತಂದೆತಾಯಿ ನೋಡಿಕೊಳ್ಳಬೇಕಾದ ವಯಸ್ಸಿನಲ್ಲಿ ನನ್ನ ಆರೈಕೆ ಮಾಡಿವುದು ನನ್ನ ಜೀವನದ ಮಹತ್ವದ ಬದಲಾವಣೆಗೆ ಕಾರಣವಾಯಿತು. ನಮ್ಮ ಚಿಕ್ಕಪ್ಪ ಜೆ.ಎಂ.ಚಂದ್ರಾಧರ ಅವರು ಸದಾ ಹೇಳುತ್ತಿರುವಂತೆ ಈಗ ಅವರು ನಿನ್ನ ಆರೈಕೆ ಮಾಡುತ್ತಾರೆ ಮುಂದೊಂದು ದಿನ ನೀನು ಅವರೆಲ್ಲರ ಆರೈಕೆ ಮಾಡಲೇ ಬೇಕು ಅದಕ್ಕಾಗಿ ನೀನು ಡಾಕ್ಟರ್ ಆಗಲೇ ಬೇಕು ಅಂದು ಸದಾ ಉತ್ಸುಕರನ್ನಾಗಿಸುತ್ತಿದ್ದರು.

ತಂದೆ ತಾಯಿಗೆ ಏನು ತಿಳಿಯದ ಕಾಲದಲ್ಲಿ ನನಕ್ಕಿಂತ ಹೆಚ್ಚು ಅವರೇ ನಿದ್ದೆಗೆಟ್ಟು ಹಗಲಿರುಳು ಹಾರೈಕೆ ಮಾಡುವಲ್ಲಿಗೆ ಹೋರಾಟವನ್ನು ಜಯಿಸಿದ್ದೇನೆ. ಈಗ ನಾನು ಆರೋಗ್ಯವಂತ ಮತ್ತು ಜವಾಬ್ದಾರಿಯುತ ವ್ಯಕ್ತಿಯಾಗಿದ್ದೇನೆ. ಇದಕ್ಕೆಲ್ಲ ನನ್ನ ಕುಟುಂಬ, ಸ್ನೇಹಿತರು ಮತ್ತು ಶಿಕ್ಷಕರು ಕಾರಣ. ನಾನು ಎಂಬಿಬಿಎಸ್ ಓದಬೇಕೆಂದು ಕನಸು ಕಂಡಿದ್ದೆ, ನೀಟ್‌ನಲ್ಲಿ ತೇರ್ಗಡೆ ಹೊಂದಿದ್ದೆ ಮತ್ತು ನನ್ನ ಕನಸಿನ ಕೋರ್ಸ್‌ಗೆ ಪ್ರವೇಶಿಸಿದೆ.ಅಂದು ನನ್ನ ಸಂತೋಷಕ್ಕೆ ಮಿತಿಯಿರಲಿಲ್ಲ. ಬಾಲ್ಯದಲ್ಲಿಯೇ ನಾನು ದೈಹಿಕ ಕಾಯಿಲೆಯ ಸಮಸ್ಯೆಗಳಿಂದ ಆಸ್ಪತ್ರೆಯಲ್ಲಿ ಮತ್ತು ಮನೆಯಲ್ಲಿಯೇ ಇದ್ದೆ. ನನ್ನಆರೈಕೆಯಲ್ಲಿ ಶ್ರಮಿಸಿದ ಇವರೆಲ್ಲರು ಹೇಗೆ ಮಾನವೀಯತೆಗೆ ಸೇವೆ ಸಲ್ಲಿಸುತ್ತಾರೆ ಎಂಬುದನ್ನು ನೋಡಿದ್ದರಿಂದ ನಾನು ವೈದ್ಯೆಯಾಗಲೇಬೇಕು, ಈ ರೀತಿಯ ಕಾಯಿಲೆಗಳಿಗೆ ಚಿಕಿತ್ಸೆಯನ್ನು ಕಂಡು ಹಿಡಿಯಬೇಕೆಂದು ತಿರ್ಮಾನಿಸಿದೆ ಎನ್ನುತ್ತಾರೆ ಡಾ. ಜೆ.ಎಂ.ಆರ್. ಅಮೃತಾ.

ಹುಟ್ಟು ಹೋರಾಟದ ಅನುವಂಶಿಯತೆಯನ್ನು ಮೈಗುಡಿಸಿಕೊಂಡಿರುವ ಕುಟುಂಬದ ಹಿನ್ನಲೆ ಇವರು ಸತತಎರಡೆರಡು ಸಲ ಈ ಕಾಯಿಲೆಯಿಂದ ಎದ್ದು ಬಂದಿರುವುದು ಪವಾಡ ಸಾದೃಶ್ಯವೇ ಸರಿ. ಇಂತಹ ವಿರಳವಾದ ಕಾಯಿಲೆಯಿಂದ ನರಳುವವರಲ್ಲಿ ಬಹುತೇಕರು ಪೂರ್ವಾಗ್ರಹ ಪೀಡಿತವಾಗಿ ಎಲ್ಲಾ ಮುಗಿದೊಯಿತು ಎನ್ನುತ್ತಾ ಚಿಕಿತ್ಸೆಕೊಡಿಸದೇ ಹಿಂದೆ ಉಳಿದು ಬಿಡುತ್ತಾರೆ. ಈ ರೀತಿಯಲ್ಲಿ ಪೂರ್ವಾಗ್ರಹ ಪೀಡಿತದಿಂದ ಕೂರದೇ ಶತಪ್ರಯತ್ನಗಳನ್ನು ಮಾಡಿದ್ದಲ್ಲಿಯೇ, ಅಚಲವಾದ ವಿಶ್ವಾಸ ಮತ್ತು ಸೂಕ್ತ ಚಿಕಿತ್ಸೆ ನೀಡುವ ಪ್ರಯತ್ನ ಮಾಡಿದರೇ ಗುಣಮುಖರಾಗಬಹುದು ಎನ್ನುವುದಕ್ಕೆ ಡಾ.ಅಮೃತಾ ಕೂಡ ಸ್ಪಷ್ಟಗುರುತು.

ಕಾಯಿಲೆ ಕೇವಲ ಮನಸ್ಸಿನ ಸ್ಥಿತಿಯಾಗಿರುತ್ತದೆ. ಅಂಗವೈಕಲ್ಯವು ನಮ್ಮಕಾಯಕಕ್ಕೆ ಅಡ್ಡಬರದು, ಯಾವುದೇ ರೀತಿಯಲ್ಲಿ ತಡೆಹಿಡಿಯದು. ಆಸ್ಪತ್ರೆಯ ಬೆಡ್ ಮೇಲಿನಿಂದ ಎದ್ದು ಬಂದು ಆಸ್ಪತ್ರೆಯ ಶತಸ್ಟೋಕ್ ಹಿಡಿಯುವವರೆಗೆ ಶ್ರಮ ವಹಿಸಿರುವುದು ಸುಲಭದ ಮಾತಲ್ಲ. ಡಾ. ಅಮೃತಾ ಅವರ ಯಶಸ್ಸಿನ ಬೆನ್ನ ಹಿಂದೆ ನಿಂತ ತಂದೆ-ತಾಯಿ, ಗುರುಗಳು, ಸ್ನೇಹಿತರು ಮತ್ತು ಹಿತೈಷಿಗಳಿಗೆ ಕೃತಜ್ಞತೆಗಳನ್ನು ಸಮರ್ಪಿಸಲೇಬೇಕು. ಸಮಾಜವನ್ನು ಉತ್ತಮ ರೀತಿಯಲ್ಲಿ ಪರಿವರ್ತಿಸಲು ಎಲ್ಲಾ ಸರಿ ಇರುವ ಯುವಜನತೆ ತಮ್ಮ ಬುದ್ದಿ ಶಕ್ತಿಯನ್ನು ಸದ್ಬಳಕೆ ಮಾಡಿಕೊಂಡಲ್ಲಿ ಉತ್ತಮ ಸಮಾಜ ನಿರ್ಮಾಣವಾಗುವುದರಲ್ಲಿ ಸಂಶಯವಿಲ್ಲ. ಬಲಿಷ್ಠ ಸಮಾಜ ನಿರ್ಮಾಣ ಮತ್ತು ಸಮಾಜ ಪರಿವರ್ತನೆಯಲ್ಲಿ ಯುವಕರು ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಇಂದು ವೈಧ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ರ್‍ಯಾಗಿಂಗ್, ಮೋಜು ಮಸ್ತಿ, ಪ್ರೀತಿ ಪ್ರೇಮ, ದುಶ್ಚಟಗಳ ಹಾವಳಿಯಲ್ಲಿ ವೈರಸ್ ಗೆದ್ದು ವೈಧ್ಯೆಯಾದ ಡಾ.ಅಮೃತಾ ಅಂತವರ ಸಂಕಲ್ಪ ಮತ್ತು ವೈದ್ಯೆಯಾಗಲೇಬೇಕು ಎನ್ನುವ ಸಾಧನೆಯ ಹಾದಿ ಯುವ ಪೀಳಿಗೆಗೆ ಸ್ಫೂರ್ತಿಯಾಗಲಿ.

## ವಾರ್ತಾ ಕಚೇರಿಯಲ್ಲಿ ಡಾ.ರಾಜಕುಮಾರ ಜಯಂತಿ ಆಚರಣೆ

■ ಹಂಪಿ ಟೈಮ್ಸ್ ಹೊಸಪೇಟೆ

ವರನಟ ಡಾ.ರಾಜಕುಮಾರ ಜನ್ಮ ದಿನಾಚರಣೆಯನ್ನು ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಏಪ್ರೀಲ್ 24ರಂದು ಸರಳವಾಗಿ ಮತ್ತು ಸಾಂಕೇತಿಕವಾಗಿ ಆಚರಿಸಲಾಯಿತು. ನಗರದ ತಾಲೂಕು ಕಚೇರಿ ಆವರಣದಲ್ಲಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಡಾ.ರಾಜಕುಮಾರ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವಿಸಲಾಯಿತು.



ಈ ಸಂದರ್ಭದಲ್ಲಿ ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಪ್ರಥಮ ದರ್ಜೆ ಸಹಾಯಕರಾದ ಕೆ.ರಾಮಾಂಜನೇಯ, ಸಿಬ್ಬಂದಿ ಪಿ.ಕೃಷ್ಣ ಸ್ವಾಮಿ, ಹೊರಗುತ್ತಿಗೆ ನೌಕರರಾದ ಜಯಶ್ರೀ ತಳವಾರ, ತಾಯೇಶ ಜೆ., ಅಪ್ರೆಂಟಿಶಿಪ್ ತರಬೇತುದಾರರಾದ ಆಕಾಶ ಇದ್ದರು.

# ಪ್ರಜಾಪ್ರಭುತ್ವ ಉಳಿಸಬೇಕು : ಸಿಎಂ ಸಿದ್ದರಾಮಯ್ಯ

**ಬೀದರ್-ಆಳಂದ:**
ಬಿಜೆಪಿ ಆಡಳಿತದ ಅವಧಿಯಲ್ಲಿ ಸಂವಿಧಾನ ಅಪಾಯದಲ್ಲಿದ್ದು ಅದನ್ನು ರಕ್ಷಣೆ ಮಾಡಬೇಕಿದೆ. ಪ್ರಜಾಪ್ರಭುತ್ವದ ಉಳಿವಿಗಾಗಿ ಎಲ್ಲರೂ ಚಿಂತನೆ ನಡೆಸಬೇಕು. ದೇಶದ ಭವಿಷ್ಯ ರೂಪಿಸಲು ಇದು ಬಹಳ ಮುಖ್ಯ. ಜನತೆ ವಿಚಾರ ಮಾಡಿ ಯಾವ ಪಕ್ಷಕ್ಕೆ ಅಧಿಕಾರ ಕೊಟ್ಟರೆ ದೇಶದ ಹಿತ ಕಾಪಾಡುತ್ತಾರೆ ಎಂದು ತೀರ್ಮಾನಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.



ಅವರು ಇಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದ ಶ್ರೀ ರಾಮ ಮಾರ್ಕೆಟ್ ಮೈದಾನದಲ್ಲಿ ಆಯೋಜಿಸಲಾಗಿದ್ದ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಸಾಗರ್ ಖಂಡ್ರೆ ಪರವಾಗಿ ಪ್ರಜಾಧ್ವನಿ -02 ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.


ನರೇಂದ್ರ ಮೋದಿಯವರು 10 ವರ್ಷಗಳಿಂದ ಪ್ರಧಾನ ಮಂತ್ರಿಯಾಗಿದ್ದಾರೆ. ಈ ಸುದೀರ್ಘ ಅವಧಿಯಲ್ಲಿ ಈ ದೇಶದ ಬಡವರಿಗೆ , ದಲಿತರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಕಾರ್ಯಕ್ರಮಗಳನ್ನು ಕೊಟ್ಟಿಲ್ಲ. ಈ ವರ್ಗದ ಪರವಾಗಿ ಯಾವತ್ತೂ ಕೆಲಸ ಮಾಡಿಲ್ಲ. ಬಿಜೆಪಿ ಸಾಮಾಜಿಕ ನ್ಯಾಯದ ವಿರುದ್ಧ, ಬಡವರ ಹಿತಕ್ಕೆ ವಿರುದ್ಧವಾಗಿರುವ ಪಕ್ಷ. ಸಂವಿಧಾನ, ಪ್ರಜಾಪ್ರಭುತ್ವಕ್ಕೆ ವಿರೋಧಿಯಾಗಿರುವ ಪಕ್ಷ. ಇದನ್ನು ಜನರು ಗಮನದಲ್ಲಿರಿಸಿಕೊಳ್ಳಬೇಕು. ನರೇಂದ್ರ ಮೋದಿ ನೀಡಿದ್ದ ಭರವಸೆಗಳನ್ನು ಒಮ್ಮೆ ನೆನಪಿಸಿಕೊಳ್ಳಿ. ಭರವಸೆಗಳನ್ನು ಈಡೇರಿಸದಿದ್ದ ಮೇಲೆ ಅವರಿಗೆ ಮತ ಕೇಳುವ ನೈತಿಕತೆ ಇಲ್ಲ. ದೇಶದ ಯುವಕರಿಗೆ ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಹೇಳಿ ನಿರುದ್ಯೋಗದ ಸಮಸ್ಯೆಯನ್ನು ಹೆಚ್ಚಿಸಿದ್ದಾರೆ. ರೈತರ ಆದಾಯ ಎರಡು ಪಟ್ಟು ಹೆಚ್ಚಿಸುತ್ತೇವೆ ಎಂದು ಹೇಳಿ, 10 ವರ್ಷಗಳಲ್ಲಿ ಒಂದು ರೂಪಾಯಿ ಕೂಡ ಹೆಚ್ಚಾಗಿಲ್ಲ. ಅದಕ್ಕೆ ಬದಲಾಗಿ ವೆಚ್ಚ ಹೆಚ್ಚಾಗಿದೆ. ಎಲ್ಲಾ ಅಗತ್ಯ ವಸ್ತುಗಳ ಬೆಲೆ ಇಳಿಸುತ್ತೇನೆ ,ಬಡವರ, ಮಧ್ಯಮವರ್ಗದ ಜನರ ಬದುಕು ಹಸನು ಮಾಡುತ್ತೇವೆ, ಅಚ್ಚೇ ದಿನ್ ಬರುತ್ತದೆ ಎಂದು ಹೇಳಿ ಎಲ್ಲಾ ಅಗತ್ಯ ವಸ್ತುಗಳ ಬೆಲೆಯನ್ನು ಹೆಚ್ಚಿಸಿದ್ದಾರೆ. ರೈತರ ಬೆಲೆಗಳಿಗೆ ನ್ಯಾಯಯುತ ಬೆಲೆ, ಸ್ವಾಮಿನಾಥನ್ ವರದಿ ಜಾರಿ ಮಾಡುತ್ತೇವೆ ಎಂದರು. ರೈತರು ಕೆಲವು ತಿಂಗಳಿನಿಂದ ಸಾಲ ಮನ್ನಾ, ಎಂ.ಎಸ್.ಪಿ ಕೊಡಲು ಕಾನೂನು ಮಾಡಬೇಕೆಂದು ಚಳುವಳಿ ಮಾಡುತ್ತಿದ್ದಾರೆ. ರೈತರು ಸತ್ತರೂ ಅವರ ಬೇಡಿಕೆ ಈಡೇರಿಸುವ ಪ್ರಯತ್ನ ಮಾಡಲಿಲ್ಲ ಎಂದರು.

**10 ವರ್ಷಗಳಲ್ಲಿ ಬಿಜೆಪಿ ಭರವಸೆಗಳನ್ನು ಈಡೇರಿಸಿಲ್ಲ..**

ನರೇಂದ್ರ ಮೋದಿಯವರು ಅವರು 10 ವರ್ಷಗಳಲ್ಲಿ ನೀಡಿದ್ದ ಯಾವ ಭರವಸೆಗಳನ್ನು ಬಗೆಹರಿಸಿಲ್ಲ. ನಾವು ಹಿಂದೆ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ 165 ರಲ್ಲಿ 158 ಭರವಸೆಗಳನ್ನು ಈಡೇರಿಸಿದ್ದಲ್ಲದೇ 30 ಹೊಸ ಯೋಜನೆಗಳನ್ನು ಜಾರಿ ಮಾಡಿದ್ದೇವೆ. 2023 ರಲ್ಲಿ ನಮ್ಮ ಪ್ರಣಾಳಿಕೆಯಲ್ಲಿ ಅನೇಕ ಭರವಸೆ ನೀಡಿ, 82 ಭರವಸೆಗಳನ್ನು ಈಡೇರಿಸಿ 5 ಗ್ಯಾರಂಟಿಗಳನ್ನೂ ಅಧಿಕಾರಕ್ಕೆ ಬಂದ 8 ತಿಂಗಳಲ್ಲಿ ಜಾರಿ ಮಾಡಿದ್ದೇವೆ. 195 ಕೋಟಿ ಮಹಿಳೆಯರು ಶಕ್ತಿ ಯೋಜನೆಯಡಿ ಪ್ರಯಾಣ ಮಾಡಿ ಅದರ ಮತ್ತ ಉಳಿತಾಯವಾಗಿದೆ. ಅನ್ನಭಾಗ್ಯ, ಗೃಹಲಕ್ಷ್ಮೀ, ಗೃಹ ಜ್ಯೋತಿ, ಯುವನಿಧಿ ಯೋಜನೆಗಳನ್ನು ಜಾರಿ ಮಾಡಿದ್ದೇವೆ ಎಂದರು.

ಬಿಜೆಪಿ, ನರೇಂದ್ರ ಮೋದಿ ನುಡಿದಂತೆ ನಡೆಯದೇ ಸುಳ್ಳು ಹೇಳಿಕೊಂಡು ದೇಶದ ಉದ್ದಗಲಕ್ಕೂ ತಿರುಗುತ್ತಾರೆ. ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದರೆ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಟೀಕಿಸಿದ್ದರು. 34000 ಕೋಟಿ ರೂ.ಗಳನ್ನು ಕಳೆದ ವರ್ಷ ಹಾಗೂ ಪ್ರಸಕ್ತ ಸಾಲಿನಲ್ಲಿ 52009 ಕೋಟಿ ರೂ.ಗಳನನು ಮೀಸಲಿರಿಸಲಾಗಿದೆ. 1.20 ಲಕ್ಷ ಕೋಟಿ ರೂ.ಗಳನ್ನು ಅಭಿವೃದ್ಧಿಗಾಗಿ ಮೀಸಲಿರಿಸಿದೆ. ಬಿಜೆಪಿಯವರು ಬಜೆಟ್ ನ್ನು ಓದಬೇಕು. ಬಜೆಟ್ ನಲ್ಲಿ 68000 ಸಾವಿರ ಕೋಟಿ ರೂ.ಗಳನ್ನು ಅಭಿವೃದ್ಧಿಗೆ ಇಟ್ಟಿದ್ದೇವೆ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಶಾಸಕ ಬಿ.ಆರ್. ಪಾಟೀಲ್, ಶಾಸಕರಾದ ಅಜಯ್ ಸಿಂಗ್, ಅಭ್ಯರ್ಥಿ ಸಾಗರ್ ಖಂಡ್ರೆ, ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ




ನಿಮ್ಮ ಹಂಪಿ ಪ್ರವಾಸ ಅನುಭವ

ನೀವು ಹಂಪಿಗೆ ಭೇಟಿ ನೀಡಿದ್ದೀರಾ? ಈ ಹಿಂದೆ ಹಂಪಿ ಹೇಗಿತ್ತು, ಈಗ ಹೇಗಾಗಿದೆ, ಮುಂದೆ ಏನೆಲ್ಲಾ ಸೌಲಭ್ಯಗಳು ಪ್ರವಾಸಿಗರಾಗಿ ನೀವು ನಿರೀಕ್ಷಿಸುತ್ತೀರಿ?
ನಿಮ್ಮದೆ ಅಭಿಪ್ರಾಯಗಳನ್ನು ಕಳುಹಿಸಿ, ಹಂಪಿ ಟೈಮ್ಸ್ ಮೂಲಕ ಸಂಬಂಧಿಸಿದ ಅಧಿಕಾರಿಗಳ ಗಮನ ಸೆಳೆಯಿರಿ.

ಹಂಪಿ ಪ್ರವಾಸೋದ್ಯಮ ಅಭಿವೃದ್ಧಿಗೆ ನಿಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಪ್ರವಾಸೋದ್ಯಮ ಪ್ರಗತಿಗೆ ಸಹಕರಿಸಿ. ನಿಮ್ಮ ಅಭಿಪ್ರಾಯದೊಂದಿಗೆ ಹಂಪಿಗೆ ಭೇಟಿ ನೀಡಿದ ಕ್ಷಣದ ನಿಮ್ಮ ಫೋಟೊ ಇರಲಿ. ನಿಮ್ಮ ಅಭಿಪ್ರಾಯಗಳನ್ನು ಈ ಕೆಳಗಿನ ಇ-ಮೇಲ್/ವಾಟ್ಸಪ್‌ಗೆ ಕಳುಹಿಸಿರಿ.

ಇಂದು ಹಾಗೂ ಹಿಂದಿನ ಕಲರ್‌ಫುಲ್ ಹಂಪಿ ಟೈಮ್ಸ್ ಇ-ಪತ್ರಿಕೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಓದಿ, ಪ್ರತಿಕ್ರಿಯಿಸಿರಿ

www.hampitimes.com
epaper.hampitimes.com
hampitimes@gmail.com
@hampitimes



9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Follow for vijayanagara dist. updates

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**25–04–2024 – ಗುರುವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ವಿಶಾಖ |
| ಯೋಗ | : ವ್ಯತಾಪತಾ |
| ಕರಣ | : ಕೌಳವ |
| ಸೂರ್ಯೋದಯ | : 05:59:07 |
| ಸೂರ್ಯಾಸ್ತ | : 18:50:49 |
| ರಾಹು | : 14:01–15:38 |
| ಯಮಘಂಡ | : 05:59–07:36 |
| ಗುಳಿಕ | : 09:12–10:49 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 24–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.47 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 167 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.774 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1576.37 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 251 ಕ್ಯುಸೆಕ್ |
| ಸಾಮರ್ಥ್ಯ | 2.956 ಟಿಎಂಸಿ |

# ತರಬೇತಿಗೆ ಗೈರಾದರೆ ಶಿಸ್ತುಕ್ರಮ

## ಡಿಸಿ ದಿವಾಕರ ಸೂಚನೆ: ಮೇ 1 ಲೋಕ ಚುನಾವಣೆ 2ನೇ ಹಂತದ ತರಬೇತಿ

■ **ಹಂಪಿ ಟೈಮ್ಸ್ ಹೊಸಪೇಟೆ**



ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಬಳ್ಳಾರಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿಜಯನಗರ ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಕ್ಕೆ ಈಗಾಗಲೇ ನಿಯೋಜನೆ ಮಾಡಲಾದ ಮತಗಟ್ಟೆ ಅಧಿಕಾರಿಗಳಿಗೆ ಮೊದಲನೇ ಹಂತದ ತರಬೇತಿಯನ್ನು ಏಪ್ರಿಲ್ 05 ರಂದು ನೀಡಲಾಗಿರುತ್ತದೆ. ಎರಡನೇ ಹಂತದ ತರಬೇತಿಯನ್ನು ಮೇ 01 ರಂದು ನಡೆಸಲು ವಿಧಾನಸಭಾ ಕ್ಷೇತ್ರವಾರು ಮತಗಟ್ಟೆ ತಂಡಗಳನ್ನು ರಚನೆ ಮಾಡಿ ಆದೇಶ ಜಾರಿ ಮಾಡಲಾಗಿರುತ್ತದೆ. ಎರಡನೇ ಹಂತದ ತರಬೇತಿಗಾಗಿ ವಿಧಾನಸಭಾ ಕ್ಷೇತ್ರವಾರು ತಂಡಗಳನ್ನು ನಿಯೋಜನೆ ಮಾಡಿರುವುದರಿಂದ ನಿಯೋಜನೆ ಮಾಡಲಾದ ವಿಧಾನಸಭಾ ಕ್ಷೇತ್ರಕ್ಕೆ ಮೇ 01 ರಂದು ನಡೆಯುವ ತರಬೇತಿಗೆ ಹಾಜರಾಗಲು ಆಯಾ ವಿಧಾನಸಭಾ ಕ್ಷೇತ್ರವಾರು ಸಾರಿಗೆ ವ್ಯವಸ್ಥೆ ಮಾಡಲಾಗಿರುತ್ತದೆ. ಈ ತರಬೇತಿಗೆ ನಿಯೋಜಿಸಿದ ಸಿಬ್ಬಂದಿಯು ತರಬೇತಿಗೆ ಗೈರು ಹಾಜರಾಗದಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ತರಬೇತಿಗೆ ಗೈರುಹಾಜರಾಗುವ ಸಿಬ್ಬಂದಿ ವಿರುದ್ಧ ಪ್ರಜಾ ಪ್ರತಿನಿಧಿ ಕಾಯ್ದೆ–1951 ನಿಯಮ 134ರಡಿಯಲ್ಲಿ ಶಿಸ್ತು ಕ್ರಮಕೈಗೊಳ್ಳಲಾಗು ವುದು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಎಂ.ಎಸ್.ದಿವಾಕರ ತಿಳಿಸಿದ್ದಾರೆ.

### ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ.ತಿಪ್ಪೇರುದ್ರಪ್ಪ.ಜೆ ಹೇಳಿಕೆ

# ಪರಿಸರ ರಕ್ಷಣೆಗೆ ಸಾಮೂಹಿಕ ಕಾಳಜಿ ಅಗತ್ಯ

■ **ಹಂಪಿ ಟೈಮ್ಸ್ ಬಳ್ಳಾರಿ**

ಪರಿಸರ ಸಂರಕ್ಷಣೆಗೆ ಮಾನವನ ಕೊಡುಗೆಗಳು ಗಣನೀಯವಾಗಿ ಕ್ಷೀಣಿಸುತ್ತಿದ್ದು, ಇದು ಮನುಕುಲಕ್ಕೆ ಸಂಕಷ್ಟ ತಂದೊಡ್ಡುತ್ತದೆ ಎಂದು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಗಳಾದ ಪ್ರೊ.ತಿಪ್ಪೇರುದ್ರಪ್ಪ.ಜೆ ಅವರು ಅಭಿಪ್ರಾಯ ಪಟ್ಟರು.

ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ಮಂಗಳವಾರ ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ ಯೋಜನೆಯ ಭಾಗವಾಗಿ ಆಯೋಜಿಸಿದ್ದ 'ಯುವಮಂಥನ' ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಪರಿಸರ ರಕ್ಷಣೆಯ ಕುರಿತು ಸಾಮೂಹಿಕವಾಗಿ ಕಾಳಜಿ ವಹಿಸಬೇಕು. ಸ್ವಚ್ಛ ಪರಿಸರ ನಿರ್ಮಾಣಕ್ಕೆ ಪ್ರತಿಯೊಬ್ಬರು ತಮ್ಮ ಅಳಿಲು ಸೇವೆ ಸಲ್ಲಿಸುವುದು ಅಗತ್ಯ, ಈ ನಿಟ್ಟಿನಲ್ಲಿ ಸ್ವಯಂಪ್ರೇರಿತರಾಗಿ ಪರಿಸರ ರಕ್ಷಣೆಗೆ ಮುಂದಾಗಬೇಕು ಎಂದು ಕರೆ ನೀಡಿದರು.

ವಿಶ್ವವಿದ್ಯಾಲಯದ ಕುಲಸಚಿವರಾದ ಎಸ್.ಎನ್ ರುದ್ರೇಶ್ ಅವರು ಮಾತನಾಡಿ, ಪರಿಸರದಲ್ಲಿನ ಹಲವಾರು ಜೀವರಾಶಿಗಳ ಉಳಿವಿಗಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಸಾಧ್ಯವಾದಷ್ಟು ಕಡಿಮೆ ಬಳಸಬೇಕು. ಸುಸ್ಥಿರ ಬದುಕಿಗೆ ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಾಣವಾಗಬೇಕು ಎಂದು ಹೇಳಿದರು.

ನೈಸರ್ಗಿಕ ತಾಪಮಾನ ನಿಯಂತ್ರಣ ಮಾಡಲು ಮರ–ಗಿಡಗಳನ್ನು ನೆಟ್ಟು ಪೋಷಿಸಬೇಕು. ಇಲ್ಲವಾದಲ್ಲಿ ಮುಂಬರುವ ಪೀಳಿಗೆಗೆ ಪರಿಸರ ಕಾಳಜಿಗೆ ನಾವು ನೀಡುವ ಕೊಡುಗೆ ಶೂನ್ಯವಾಗುತ್ತದೆ ಎಂದು ತಿಳಿಸಿದರು.




ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ವಿಜಯಕುಮಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದ ಸಂಯೋಜಕರಾದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ನಿರಂಜನ್ ಅತಿಥಿಗಳನ್ನು ಸ್ವಾಗತಿಸಿದರು. ಜಾಗತಿಕ ತಾಪಮಾನ ಏರಿಕೆ, ಹವಾಮಾನ ಬದಲಾವಣೆ, ಸುಸ್ಥಿರ ಅಭಿವೃದ್ಧಿ ಗುರಿಗಳು ಸೇರಿದಂತೆ ಪರಿಸರ ರಕ್ಷಣೆಯ ಕುರಿತಾದ 10 ವಿವಿಧ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಂದ ಸಂವಾದ ಕಾರ್ಯಕ್ರಮ ನಡೆಯಿತು.

ವಿವಿಧ ವಿಭಾಗಗಳ 50 ವಿದ್ಯಾರ್ಥಿಗಳು ತಮ್ಮ ವಿಚಾರಧಾರೆ ಮಂಡಿಸಿದರು. ಸಂವಾದ ಗೋಷ್ಠಿಗೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಾದ ಡಾ.ಹನುಮೇಶ್ ವೈದ್ಯ, ಡಾ.ಕೆ.ಎಸ್ ಲೋಕೇಶ್, ಡಾ.ಅಂಶುಮಾಲಿ ಅವರು ತೀರ್ಪುಗಾರರಾಗಿ ಆಗಮಿಸಿದ್ದರು. ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಬೋಧಕರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮತಗಟ್ಟೆ ಕೇಂದ್ರಗಳಿಗೆ ವೀಕ್ಷಕರು ಭೇಟಿ ಪರಿಶೀಲನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಸಾಮಾನ್ಯ ವೀಕ್ಷಕರಾದ ಚಂದ್ರಶೇಖರ ಸಖಮುರಿ ಅವರು ಏಪ್ರೀಲ್ 24ರಂದು, ವಿಜಯನಗರ ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಗುರುತಿಸಿರುವ ಲೋಕಸಭಾ ಚುನಾವಣೆಯ ಮತಗಟ್ಟೆ ಕೇಂದ್ರಗಳಿಗೆ ಖುದ್ದು ಭೇಟಿ ನೀಡಿ ಮತಗಟ್ಟೆಗಳ ವೀಕ್ಷಣೆ ನಡೆಸಿದರು.

ಹೊಸಪೇಟೆ ನಗರದಲ್ಲಿ ಮೊದಲಿಗೆ ಟಿಎಂಐ ಸಂಸ್ಥೆಯ ಕೈಗಾರಿಕಾ ತರಬೇತಿ ಕೇಂದ್ರ ಹತ್ತಿರದಲ್ಲಿರುವ ಮತಗಟ್ಟೆ ಕೇಂದ್ರಗಳಿಗೆ ತೆರಳಿದರು. ಅಲ್ಲಿನ ಮತಗಟ್ಟೆ ಸಂಖ್ಯೆ 106, 107, 108 ಹಾಗೂ 109 ಸಂಖ್ಯೆಯ ಮತಗಟ್ಟೆಗಳಲ್ಲಿನ ರ‍್ಯಾಂಪ್, ಕುಡಿಯುವ ನೀರು ಮತ್ತು ಶೌಚಾಲಯಗಳನ್ನು ವೀಕ್ಷಿಸಿದರು. ಬಳಿಕ ಹಂಪಿ ರಸ್ತೆಯಲ್ಲಿರುವ ಶ್ರೀಮತಿ ಉಗಮದೇವಿ ಭವರ್‌ಲಾಲ್ ನಾಹರ್ ಥಿಯೋಸಾಫಿಕಲ್ ಮಹಿಳಾ ಕಾಲೇಜಿಗೆ ತೆರಳಿ ಅಲ್ಲಿನ ಮತಗಟ್ಟೆ ಸಂಖ್ಯೆ 23, 24, 25 ಮತ್ತು 26ಗಳಲ್ಲಿನ ಬಿಎಲ್‌ಓ ಅವರೊಂದಿಗೆ ಚರ್ಚಿಸಿ ಮತಗಟ್ಟೆಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಿದ ಬಗ್ಗೆ ಖಚಿತಪಡಿಸಿಕೊಂಡರು. ಅಲ್ಲಿಂದ ಸಂಖ್ಯೆ 20, 21 ಹಾಗೂ 22ರ ಮತಗಟ್ಟೆ ಕೇಂದ್ರಗಳ ಸ್ಥಳವಾದ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ ಅಲ್ಲಿನ ಮತಗಟ್ಟೆ ಕೇಂದ್ರಗಳ ಸ್ಥಿತಿಗತಿಯನ್ನು ಪರಿಶೀಲಿಸಿದರು. ಅಲ್ಲಿ ಮುಚ್ಚಿದ್ದ ಶೌಚಾಲಯವನ್ನು ಕೂಡಲೇ ತೆರೆದು ಸರಿಪಡಿಸಬೇಕು ಎಂದು ಬಿಎಲ್‌ಓ ಅವರಿಗೆ ನಿರ್ದೇಶನ ನೀಡಿದರು. ಬಳಿಕ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ವಲಯ ಅರಣ್ಯಾಧಿಕಾರಿಗಳ ಕಚೇರಿಯಲ್ಲಿನ ಮತಗಟ್ಟೆಗೆ ಭೇಟಿ ನೀಡಿ ಅಲ್ಲಿನ ಮತಗಟ್ಟೆಯ ಬಗ್ಗೆ ಮಾಹಿತಿ ಪಡೆದುಕೊಂಡರು. ಬಳಿಕ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಗೆ ಭೇಟಿ ನೀಡಿ ಅಲ್ಲಿನ ಮತಗಟ್ಟೆ ಸಂಖ್ಯೆ 15ನ್ನು ವೀಕ್ಷಿಸಿ ಕೆಲವು ಮಾರ್ಪಾಡುಗಳಿಗೆ ಸಲಹೆ ಮಾಡಿದರು. ನಂತರ ಚಿತ್ತವಾಡಗಿಯ ವಿನೋಬಾಭಾವೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು. ಅಲ್ಲಿನ ಸಂಖ್ಯೆ 1, 2ರ ಮತಗಟ್ಟೆಗಳು ಹಾಗೂ ಅಲ್ಲಿನ ಸ್ಥಿತಿಗತಿಯ ಬಗ್ಗೆ ಮಾಹಿತಿ ಪಡೆದರು.



ಮತಗಟ್ಟೆಗಳಿಗೆ ಆಗಮಿಸಿದ ವೇಳೆಯಲ್ಲಿ ವಿಕಲಚೇತನರು ಸಹ ಸರಳವಾಗಿ ಮತದಾನ ಕೇಂದ್ರ ಪ್ರವೇಶಿಸಿ ಮತದಾನ ಮಾಡಲು ಅನುಕೂಲವಾಗುವಂತೆ ಮತಗಟ್ಟೆಗಳಲ್ಲಿನ ಹೊರಾಂಗಣ ಮತ್ತು ಬಾಗಿಲು ಬಳಿಯಲ್ಲಿ ವೈಜ್ಞಾನಿಕ ರೀತಿಯಲ್ಲಿ ರ‍್ಯಾಂಪ್ ವ್ಯವಸ್ಥೆ ಮಾಡಲು ಕೂಡಲೇ ಕ್ರಮವಹಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳು ಮತ್ತು ಬಿಎಲ್‌ಓಗಳಿಗೆ ಸಾಮಾನ್ಯ ವೀಕ್ಷಕರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತರಾದ ಚಂದ್ರಪ್ಪ, ಹೊಸಪೇಟೆ ತಹಸೀಲ್ದಾರರಾದ ಶ್ರುತಿ, ಸಾಮಾನ್ಯ ವೀಕ್ಷಕರ ಲೈಜನ್ ಅಧಿಕಾರಿ ವರುಣ್ ಆರ್ ಸೇರಿದಂತೆ ಆಯಾ ಮತಗಟ್ಟೆಗಳ ಕೇಂದ್ರಗಳಿಗೆ ಸಂಬಂಧಿಸಿದ ಬಿಎಲ್‌ಓಗಳು ಹಾಗೂ ಇನ್ನಿತರ ಅಧಿಕಾರಿಗಳು ಇದ್ದರು.

ಪಾಪಿನಾಯಕನಹಳ್ಳಿಗೆ ಭೇಟಿ: ಸಾಮಾನ್ಯ ವೀಕ್ಷಕರು ಗ್ರಾಮೀಣ ಪ್ರದೇಶದಲ್ಲಿನ ಮತಗಟ್ಟೆಗಳಿಗೆ ಸಹ ಭೇಟಿ ನೀಡಿದರು. ಹೊಸಪೇಟೆ ನಗರದಲ್ಲಿನ ವಿವಿಧ ಮತಗಟ್ಟೆಗಳಿಗೆ ಭೇಟಿಗೆ ಮೊದಲು ಹೊಸಪೇಟೆ ತಾಲೂಕಿನ ಕಮಲಾಪುರ ಹೋಬಳಿಯ ಪಾಪಿನಾಯಕನಹಳ್ಳಿಯಲ್ಲಿನ ಮತಗಟ್ಟೆ ಸಂಖ್ಯೆ 241ಕ್ಕೆ ಭೇಟಿ ನೀಡಿ ಆ ಮತಗಟ್ಟೆಯಲ್ಲಿನ ಸ್ಥಿತಿಗತಿಯ ಬಗ್ಗೆ ಮಾಹಿತಿ ಪಡೆದರು.

ಮೈಕ್ರೋ ವೀಕ್ಷಕರೊಂದಿಗೆ ಸಭೆ: ಮಧ್ಯಾಹ್ನ ಊಟದ ವಿರಾಮದ ನಂತರ ಸಾಮಾನ್ಯ ವೀಕ್ಷಕರು ಹೊಸಪೇಟೆ ನಗರದಲ್ಲಿನ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಡಳಿತ ಭವನದಲ್ಲಿನ ಆಡಿಟೋರಿಯಂ ಹಾಲನಲ್ಲಿ ಮೈಕ್ರೋ ವೀಕ್ಷಕರೊಂದಿಗೆ ಸಭೆ ನಡೆಸಿದರು. ಮೈಕ್ರೋ ವೀಕ್ಷಕರು ಚುನಾವಣೆಯಲ್ಲಿ ತಮ್ಮ ಕಾರ್ಯಚಟುವಟಿಕೆಗಳೇನು ಎಂಬುದರ ಬಗ್ಗೆ ಸರಿಯಾಗಿ ಅರಿತು ನ್ಯಾಯಸಮ್ಮತವಾಗಿ ಕಾರ್ಯನಿರ್ವಹಿಸಬೇಕು ಎಂದು ಸಾಮಾನ್ಯ ವೀಕ್ಷಕರು ಮಾರ್ಗದರ್ಶನ ಮಾಡಿದರು.

## ನಗರ, ಗ್ರಾಮೀಣ ವಿವಿಧೆಡೆ ವಿದ್ಯುತ್ ವ್ಯತ್ಯಯ

**ಮೊದಲ ಪುಟದಿಂದ**

ಒಳಪಡುವ ಸುತ್ತಲಿನ ಪ್ರದೇಶಗಳಾದ ಬಳ್ಳಾರಿ ರಸ್ತೆ, ಈಶ್ವರ ನಗರ, ಉಕ್ಕಡಕೆರೆ, ಜೆ.ಪಿ.ನಗರ, ಅರವಿಂದ ನಗರ, ಬಸ್ ಡಿಪೊ ಏರಿಯಾ, ಸಾಯಿ ಕಾಲೋನಿ, ಕೊಂಡನಾಯಕನಹಳ್ಳಿ, ನಾಗೇನಹಳ್ಳಿ, ಅನಂತಶಯನಗುಡಿ, ಸಂಕ್ಲಾಪುರ ಇಂಡಸ್ಟ್ರೀಯಲ್ ಏರಿಯಾ, ಕರ್ನಾಟಕ ಆಯಿಲ್ ಫ್ಯಾಕ್ಟರಿ ಏರಿಯಾ, ಕಾರಿಗನೂರು, ವಿನಾಯಕ ನಗರ, ರಾಮಾ ಟಾಕೀಸ್ ಏರಿಯಾ, ಚಲುವಾದಿ ಕೇರಿ, ಉಕ್ಕಡಕೇರಿ, ಚಿತ್ರಕೇರಿ, ಮ್ಯಾಸಕೇರಿ, ಬಾಣದ ಕೇರಿ, ಜಂಬುನಾಥ ಹಳ್ಳಿ, ಕಾರಿಗನೂರು, ಮಾರುತಿ ಕಾಲೋನಿ, ಸಂಕ್ಲಾಪುರ, ಸಾಯಿಬಾಬಾ ಗುಡಿ ಏರಿಯಾ, ಡ್ಯಾಮ್ ರೋಡ್, ಟಿಬಿ ಡ್ಯಾಮ್, ಎನ್.ಸಿ.ಕಾಲೋನಿ, ಗಾಂಧೀ ಕಾಲೋನಿ, ಗೋಕುಲ ನಗರ, ನಿಶಾನಿ ಕ್ಯಾಂಪ್, ಕಲ್ಲಹಳ್ಳಿ, ರಜಾಪುರ, ಜಿ.ಜಿ.ಕ್ಯಾಂಪ್, ಪಿ.ಕೆ.ಹಳ್ಳಿ, ಕಣಿವೆರಾಯನಗುಡಿ, ಜಿ.ವಿ.ಗೆರೆ, ಧರ್ಮಸಾಗರ ಏರಿಯಾ, ಮಲಪನಗುಡಿ ಗ್ರಾಮ ಪಂಚಾಯಿತಿ, ಹಂಪಿ ಗ್ರಾಮ ಪಂಚಾಯಿತಿ, ಬುಕ್ಕಸಾಗರ, ನಲ್ಲಾಪುರ ಮತ್ತು ಸಿರಾತಾಮ ತಾಂಡಾ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು ಸಾರ್ವಜನಿಕರು ಮತ್ತು ಗ್ರಾಹಕರು ಸಹಕರಿಸಬೇಕು ಎಂದು ಜೆಸ್ಕಾಂ ಹೊಸಪೇಟೆ ನಗರ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತ ರರು ತಿಳಿಸಿದ್ದಾರೆ.

# ಕೊಲೆಗಾರನಿಗೆ ಗಲ್ಲು ಶಿಕ್ಷೆ ವಿಧಿಸಿ




■ **ಹಂಪಿ ಟೈಮ್ಸ್ ಕೊಟ್ಟೂರು**

ಹುಬ್ಬಳ್ಳಿಯ ವಿಧ್ಯಾರ್ಥಿನಿ ನೇಹಾ ಹಿರೇಮಠ್ ಹತ್ಯೆ ಖಂಡಿಸಿ ಪಟ್ಟಣದ ಬಸ್ ನಿಲ್ದಾಣದ ಮುಂಭಾಗ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಪ್ರತಿಭಟನೆ ನಡೆಸಿದರು.

ಅಮಾನವೀಯ ಕೃತ್ಯವೆಸಗಿದ ಫಯಾಜ್‌ಗೆ ಗಲ್ಲು ಶಿಕ್ಷೆ ಆಗಬೇಕೆಂದು ಆಗ್ರಹಿಸಿದರು. ನೇಹಾಳ ಕುಟುಂಬಕ್ಕೆ ಸರ್ಕಾರ ಶೀಘ್ರ ನ್ಯಾಯ ದೊರಕಿಸಿಕೊಡಬೇಕು ಇಲ್ಲವಾದರೆ ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಹೆಣ್ಣು ಮಕ್ಕಳಿಗೆ ರಕ್ಷಣೆ ಕೊಡದ ಸರ್ಕಾರ ಇದ್ದು ಪ್ರಯೋಜನವಿಲ್ಲ. ಪ್ರೀತಿಯನ್ನು ನಿರಾಕರಿಸಿದಳು ಎಂಬ ಕಾರಣಕ್ಕೆ ಹತ್ಯೆ ನಡೆಸಿದ್ದು, ಈ ಕೃತ್ಯವನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಖಂಡಿಸುತ್ತದೆ ಎಂದರು. ತಾಲೂಕು ಆಡಳಿತ ಕಚೇರಿಗೆ ತೆರಳಿ ತಾಲೂಕು ದಂಡಾಧಿಕಾರಿಗಳ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಡಾ.ರಾಕೇಶ್, ಭರಮಪ್ಪ ರೆಡ್ಡಿ, ದರ್ಶನ್, ಉಮೇಶ್ ಗೌಡ, ಗುರುಬಸವರಾಜ್, ಕಾಸಾಲ ಮಂಜುನಾಥ, ವಿಕಾಸ, ಸೇರಿದಂತೆ ಮುಂತಾದವರು ಇದ್ದರು.

# ವಾರ್ತಾ ಇಲಾಖೆಯಲ್ಲಿ ಡಾ.ರಾಜ್ ಜನ್ಮದಿನಾಚರಣೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಭಾರತೀಯ ಚಿತ್ರರಂಗ ಕಂಡ ಅದ್ಭುತ ನಟ, ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಡಾ.ರಾಜ್‌ಕುಮಾರ್ ಅವರ 96 ನೇ ಜಯಂತಿಯನ್ನು ಇಲ್ಲಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಬುಧವಾರ ಸರಳವಾಗಿ ಆಚರಿಸಲಾಯಿತು.

ಲೋಕಸಭಾ ಸಾರ್ವತ್ರಿಕ ಚುನಾವಣೆ ಅಂಗವಾಗಿ ಮಾದರಿ ನೀತಿ ಸಂಹಿತೆ ಜಾರಿ ಹಿನ್ನಲೆಯಲ್ಲಿ ಡಾ.ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ತುಕಾರಾಂ ರಾವ್ ಬಿ.ವಿ ಅವರು ಪುಷ್ಪ ನಮನ ಸಲ್ಲಿಸುವ ಮೂಲಕ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಪಿಂಚಣಿ ಮತ್ತು ಸಣ್ಣ ಉಳಿತಾಯ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಹೊನ್ನುರಪ್ಪ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಥಮ ದರ್ಜೆ ಸಹಾಯಕ ವಿ.ಸಿ.ಗುರುರಾಜ್, ಸಿಬ್ಬಂದಿಗಳಾದ ರೋಜಾ ಮೇರಿ, ಹೆಚ್.ವಿಜಯ್ ಕುಮಾರ್, ಹನುಮೇಶ್. ಹೆಚ್, ಮಲ್ಲೇಶಪ್ಪ.ವೈ., ವರದಿಗಾರರಾದ ಮಹೇಂದ್ರ ಕುಮಾರ್, ಪಿ.ಟಿ.ಚೌದರಿ, ರವಿ, ಛಾಯಾಗ್ರಾಹಕ ರುದ್ರಮುನಿ ಸ್ವಾಮಿ, ತರಬೇತುದಾರರಾದ ಅಭಿಷೇಕ್, ತಿಪ್ಪೇಸ್ವಾಮಿ ಮತ್ತು ಎಂಸಿಎಂಸಿ ಸಮಿತಿಯ ಸಿಬ್ಬಂದಿಗಳಾದ ತಿಪ್ಪೇಸ್ವಾಮಿ, ರಾಜು.ವಿ ಉಪಸ್ಥಿತರಿದ್ದರು.







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA